

ANANTHKUMAR PRATISHTHANA

# ಅನಂತಪಥ

‘ಅನಂತಕುಮಾರ್ ಮಾಡಿರುವ ಕೆಲಸಗಳೇ ನಮಗೆ ಪ್ರೇರಣೆ’



ಪುಟ 2 ಬಸವರಾಜ ಬೊಮ್ಮಾಯಿ

ಸಂಪುಟ - 2 ಮೇ - 2022 ಸಂಚಿಕೆ - 23




# ಬಲಿಷ್ಠ ಭಾರತನಿರ್ಮಾಣಕ್ಕಾಗಿ ಅನಂತ ಪ್ರೇರಣೆ


**ಶ್ರೀ ಥಾವರ್ ಚಂದ್ ಗೆಹ್ಲೋಟ್** ಸನ್ಮಾನ್ಯ ರಾಜ್ಯಪಾಲರು, ಕರ್ನಾಟಕ


1980ರಲ್ಲಿ ಮೊದಲಬಾರಿಗೆ ನಾನು ಮಧ್ಯಪ್ರದೇಶದ ವಿಧಾನಸಭೆಯ ಸದಸ್ಯನಾಗಿ ಚುನಾಯಿತನಾಗಿ ನಂತರ ಮೂರು ಬಾರಿ ಶಾಸಕನಾಗಿದ್ದೆ, ನಾನು ಯುವ ಮೋರ್ಚಾದ ಕಾರ್ಯಕರ್ತನೂ ಆಗಿದ್ದೆ. ಅಂದಿನಿಂದಲೇ ಅನಂತಕುಮಾರ್ ಅವರ ಹೆಸರನ್ನು ನಾನು ಕೇಳುತ್ತಿದ್ದೆ. 1996 ರಲ್ಲಿ ನಾನು ಸಂಸದನಾಗಿ ಆಯ್ಕೆಯಾದ ವರ್ಷದಲ್ಲಿಯೇ ಅನಂತಕುಮಾರ್ ಕೂಡ ಸಂಸತ್ತಿನ ಸದಸ್ಯರಾಗಿ ಆಯ್ಕೆಯಾಗಿದ್ದರು. ಅಂದಿನಿಂದ ಅವರು ನಿಧನರಾಗುವ ತನಕ, 2018ರ ವರೆಗೆ ನಾನು ಅವರ ನಿರಂತರ ಸಂಪರ್ಕದಲ್ಲಿದ್ದೆ.

ಅಟಲ್‌ಜೀ ಸರ್ಕಾರದಲ್ಲಿ ಅವರು ಅನೇಕ ಮಂತ್ರಾಲಯಗಳಲ್ಲಿ ಮಂತ್ರಿಯಾಗಿ ಅತ್ಯಂತ ಸಮರ್ಥವಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು. ನಾನು ಸಂಸತ್ತಿನ ಸದಸ್ಯನಾಗಿ ನನ್ನ ಕ್ಷೇತ್ರದ ಕೆಲಸಕ್ಕಾಗಿ ಅವರ ಬಳಿ ಹೋಗುತ್ತಿದ್ದೆ. ಪ್ರೀತಿಯಿಂದ ನಮ್ಮ ಮಾತುಗಳನ್ನು ಆಲಿಸಿ, ತತ್‌ಕ್ಷಣ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಕೆಲಸ ಮಾಡಿಸಿಕೊಡಲು ನಿರ್ದೇಶಿಸುತ್ತಿದ್ದರು. ನಾನು ರಾಷ್ಟ್ರೀಯ ಸಚಿವನಾಗಿ, ಕೇಂದ್ರೀಯ ಚುನಾವಣಾ ಸಮಿತಿಯ ಸದಸ್ಯನಾಗಿ ಹಾಗೂ ಪಾರ್ಲಿಮೆಂಟರಿ ಬೋರ್ಡಿನ ಸದಸ್ಯನಾಗಿ ಜವಾಬ್ದಾರಿಗಳನ್ನು ನಿಭಾಯಿಸುವಾಗ ಅನಂತಕುಮಾರರೂ ಈ ಎಲ್ಲ ಹುದ್ದೆಗಳಲ್ಲಿ ನಮ್ಮ ಜೊತೆ ಕೆಲಸ ನಿರ್ವಹಿಸುತ್ತಿದ್ದರು.



ಅನಂತ ಪ್ರೇರಣಾ ಕೇಂದ್ರದ ಉದ್ಘಾಟನೆಯ ಸಂದರ್ಭದ ಚಿತ್ರ

ನಾನು ಅವರನ್ನು ತುಂಬಾ ಹತ್ತಿರದಿಂದ ನೋಡಿದ್ದೇನೆ. ನಾನೂ ಅವರಿಂದ ಪ್ರಭಾವಿತನಾಗಿದ್ದೇನೆ. ಅವರು ಮಧ್ಯಪ್ರದೇಶದಲ್ಲಿ ಭಾರತೀಯ ಜನತಾ ಪಾರ್ಟಿಯ ಪ್ರಭಾರಿಯಾಗಿ ಕೆಲಸ ಮಾಡುವಾಗಲೂ ನಾನು ಅವರ ನಿರಂತರ ಸಂಪರ್ಕದಲ್ಲಿದ್ದೆ.

ಅಟಲ್‌ಜೀ ಸರ್ಕಾರದಲ್ಲಿ ಅವರು ನಿರ್ವಹಿಸಿದ ಅನೇಕ ಮಂತ್ರಾಲಯಗಳಲ್ಲಿ ನಗರಾಭಿವೃದ್ಧಿ ಖಾತೆ ಕೂಡ ಒಂದು. ಆಗ ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆಯಿತ್ತು. ಕುಡಿಯುವ ನೀರಿನ ಯೋಜನೆಗಾಗಿ ಮನವಿಯನ್ನು ಅನಂತಕುಮಾರ್ ಅವರ ಬಳಿಗೆ ತೆಗೆದುಕೊಂಡು ಹೋದಾಗ ಅವರು ಏಕಕಾಲಕ್ಕೆ ಕೋಟ್ಯಂತರ ರೂಪಾಯಿಗಳ ಎಂಟು ಯೋಜನೆಗಳಿಗೆ ಅನುಮೋದನೆ ನೀಡಿದರು. ಅಷ್ಟಲ್ಲದೆ, ಅವರೇ ಖುದ್ದಾಗಿ ಮಧ್ಯಪ್ರದೇಕ್ಕೆ ಆಗಮಿಸಿ ಅಭಿವೃದ್ಧಿ ಕಾರ್ಯಗಳನ್ನು ಉದ್ಘಾಟಿಸಿದರು. ಆ ಸಮಯದಲ್ಲಿ ಮಧ್ಯಪ್ರದೇಶದಲ್ಲಿ ಸರ್ಕಾರ ಬೇರೆಯವರದಾಗಿತ್ತು. ರಸ್ತೆಗಳು ತುಂಬಾ ಕೆಟ್ಟು ಹೋಗಿದ್ದವು. ಅವರು ಇಂದೋರಿನಿಂದ ಆಗ್ರಾ ಕಡೆ ಪ್ರಯಾಣಿಸುವ ರಸ್ತೆಯಲ್ಲಿ ತುಂಬಾ ಗುಂಡಿಗಳಿದ್ದವು.

ಆಗ ಅವರು ತಮ್ಮ ಭಾಷಣದಲ್ಲಿ “ಇದು ಎಂತಹ ಮಧ್ಯಪ್ರದೇಶ? ಇಲ್ಲಿ ಗುಂಡಿಗಳಲ್ಲಿ ರಸ್ತೆಗಳಿವೆಯೆ ಅಥವಾ ರಸ್ತೆಗಳಲ್ಲಿ ಗುಂಡಿಗಳಿವೆಯೆ?” ಎಂದು ತಮಾಷೆಯಾಗಿ ಹೇಳಿದ್ದರು. ಅಲ್ಲಿಗೆ ಸುಮ್ಮನಾಗದೆ, ಆ ಸಮಸ್ಯೆಯನ್ನು ಬಗೆಹರಿಸಲೂ ಕೂಡ ನಿರಂತರ ಪ್ರಯತ್ನ ಮಾಡಿದ್ದರು. ಬಲಿಷ್ಠ ಭಾರತದ ನಿರ್ಮಾಣಕ್ಕಾಗಿ, ಕರ್ನಾಟಕದ ಮತ್ತು ದೇಶದ ಜನರ ಹಿತಕ್ಕಾಗಿ ಸಮರ್ಪಣಾಭಾವದಿಂದ ಅವರು ಕೆಲಸ ಮಾಡಿದರು. ಕೊನೆಯುಸಿರಿನ ತನಕವೂ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮತ್ತು ಪ್ರಾಮಾಣಿಕತೆಯಿಂದ ನಿಭಾಯಿಸಿದರು. ಅವರು ಗಂಭೀರವಾದ ಕಾಯಿಲೆಯಿಂದ ಬಳಲುತ್ತಿದ್ದಾಗ ಸದನದಲ್ಲಿ ಅವರನ್ನು ನೋಡಿ ಎರಡು ಮೂರು ಬಾರಿ, “ನಿಮ್ಮ ಮುಖದಲ್ಲಿ ಏನೋ ಸಮಸ್ಯೆಯಿದ್ದಂತೆ ಕಾಣುತ್ತಿದೆ, ಆರೋಗ್ಯ ಚೆನ್ನಾಗಿಲ್ಲವೆ” ಎಂದು ಕೇಳಿದಾಗ, ಅವರು ನಗು ಮುಖದಿಂದ ‘ಇಲ್ಲ ಏನೂ ಆಗಿಲ್ಲ’ ಎಂದೇ ಉತ್ತರಿಸಿದರು. ಕೆಲವರು ಆ ಕಾಯಿಲೆಯನ್ನು ನೆನಸಿಕೊಂಡೇ ಗಾಬರಿಯಾಗುತ್ತಾರೆ. ಆದರೆ ಅನಂತಕುಮಾರ್ ಅವರ ಮುಖದಲ್ಲಿ ದುಃಖ, ಉದಾಸೀನ ಭಾವ ಯಾವುದೂ ಕಾಣಲಿಲ್ಲ. ಆ ಸಮಯದಲ್ಲಿ ಅವರು ಸಂಸದೀಯ ವ್ಯವಹಾರಗಳ ಖಾತೆ ನಿರ್ವಹಿಸುತ್ತಿದ್ದರು. ಸದನದಲ್ಲಿ ಪ್ರತಿದಿನವೂ ಹಾಜರಾಗುತ್ತಿದ್ದರು. ಆರೋಗ್ಯದ ನೆಪವೊಡ್ಡಿ ಒಂದು ದಿನವೂ ಸದನಕ್ಕೆ ಗೈರಾಗಲಿಲ್ಲ. ಸದಾಕಾಲ ಕಾರ್ಯನಿರತರಾಗಿರುತ್ತ ತಮ್ಮ ಕರ್ತವ್ಯನಿಷ್ಠೆ ಮೆರೆದರು. ಇದು ನಮಗೆಲ್ಲ ಪ್ರೇರಣೆಯಾಗಿದೆ.

ಕರ್ನಾಟಕದ ಅಭಿವೃದ್ಧಿ ಮತ್ತು ಸಂಘಟನೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಹಾಗೂ ಜನರಲ್ಲಿ ರಾಷ್ಟ್ರಭಕ್ತಿ ಜಾಗೃತಗೊಳಿಸಲು ಅನಂತಕುಮಾರ್ ಕೈಗೊಂಡ ಕಾರ್ಯಕ್ರಮಗಳನ್ನು ಮುಂದುವರಿಸುವ ಅಗತ್ಯ ಇಂದಿಗೂ ಇದೆ. ಅನಂತ ಪ್ರೇರಣಾ ಕೇಂದ್ರವು ಜನರಲ್ಲಿ ದೇಶಭಕ್ತಿ ಜಾಗೃತಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತದೆ ಎಂಬ ವಿಶ್ವಾಸ ನನಗಿದೆ. ಅನಂತಕುಮಾರ್ ಅವರು ಸದಾ ಎಲ್ಲ ವರ್ಗಗಳ ಜನರ ಚಿಂತನೆಯನ್ನು ಮಾಡುತ್ತಿದ್ದರು ಹಾಗೂ “ದೇಶ ಮೊದಲು, ನಂತರ ನಾವು, ದೇಶವಿದ್ದರೆ ನಾವು “ಎಂಬ ತತ್ವವನ್ನು ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದಿದ್ದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದು ಬಲಿಷ್ಠ ಭಾರತದ ನಿರ್ಮಾಣಕ್ಕಾಗಿ ಶ್ರಮಿಸೋಣ, ಅನಂತಕುಮಾರರ ಕಾರ್ಯಕ್ರಮಗಳನ್ನು ಮುಂದುವರಿಸುವ ಕೆಲಸವನ್ನು ಅನಂತ ಪ್ರೇರಣಾ ಕೇಂದ್ರ ಮಾಡಲಿ ಎಂದು ಹಾರೈಸುತ್ತೇನೆ.

# ‘ಅನಂತಕುಮಾರ್ ಮಾಡಿರುವ ಕೆಲಸಗಳೇ ನಮಗೆ ಪ್ರೇರಣೆ’ ಬಸವರಾಜ ಬೊಮ್ಮಾಯಿ

ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ



ಯಾವುದೇ ಸ್ಥಿತಿಯಲ್ಲಿ, ಯಾವುದೇ ಹಂತದಲ್ಲಿ ನಾಯಕತ್ವವನ್ನು ವಹಿಸಿಕೊಳ್ಳಬಲ್ಲವನೇ ಸಹಜ ನಾಯಕ ಎನಿಸಿಕೊಳ್ಳುತ್ತಾನೆ. ಅಂತಹ ಸಹಜ ನಾಯಕರಾದ ಅನಂತಕುಮಾರರು ವಿದ್ಯಾರ್ಥಿದೆಸೆಯಿಂದಲೇ ಆಂದೋಲನಗಳಲ್ಲಿ ಭಾಗವಹಿಸಿದರು. ಮುಂದೆ ಎಬಿವಿಪಿ ಸಂಘಟನೆಯಲ್ಲಿ ನಾಯಕತ್ವ ವಹಿಸಿದರು. ಭಾರತೀಯ ಜನತಾ ಪಕ್ಷದ ಸಕ್ರಿಯ ಕಾರ್ಯಕರ್ತನಾಗಿಯೂ ನಾಯಕತ್ವ ವಹಿಸಿದರು. ನಾಯಕತ್ವವನ್ನು ವಹಿಸಿಕೊಂಡು ಪಕ್ಷವನ್ನು ಬಲಪಡಿಸಿ, ಅಧಿಕಾರಕ್ಕೆ ತಂದರು. ಹತ್ತು ಜನರಿರಲಿ 10 ಲಕ್ಷ ಜನರೇ ಬರಲಿ, ಸಮರ್ಥ ನಾಯಕತ್ವ ವಹಿಸಬಲ್ಲ ಅವರು ತಮ್ಮ ಅಪರೂಪದ ವ್ಯಕ್ತಿತ್ವದಿಂದ ದೊಡ್ಡ ನಾಯಕರಾದರು.

ನನ್ನ ಮತ್ತು ಅವರ ನಡುವೆ ಬಹಳ ಚಿಕ್ಕಂದಿನಿಂದಲೂ ಸ್ನೇಹವಿತ್ತು. ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಅವರ ತಂದೆ ಶ್ರೀ ನಾರಾಯಣ ಶಾಸ್ತ್ರಿ ಮತ್ತು ಅವರ ತಾಯಿ ಶ್ರೀಮತಿ ಗಿರಿಜಾ ಶಾಸ್ತ್ರಿಯವರ ಜೊತೆ ನನ್ನ ತಂದೆಯವರಿಗೆ ಒಡನಾಟವಿತ್ತು. ನಾನೂ ಅನಂತಕುಮಾರರೂ ಒಂದೇ ಕಾಲೇಜಿನಲ್ಲಿ ಓದಿದ್ದೇವೆ. ನಮ್ಮಿಬ್ಬರಲ್ಲಿ ಯಾರೇ ಕಾಲೇಜಿಗೆ ತಡವಾಗಿ ಹೋದರೂ ಇನ್ನೊಬ್ಬರಿಗೆ ಪಕ್ಕದಲ್ಲಿ ಸ್ಥಳ ಕಾಯ್ದಿರಿಸುವಷ್ಟು ಆತ್ಮೀಯತೆ ನಮ್ಮ ನಡುವೆ ಇತ್ತು.

ನಾವು ಪಿಯುಸಿ ಓದುತ್ತಿರುವಾಗ ತುರ್ತುಪರಿಸ್ಥಿತಿ ಘೋಷಣೆಯಾಯಿತು. ಆ ಸಂದರ್ಭದಲ್ಲಿ ನಾವಿಬ್ಬರೂ ಕುಳಿತುಕೊಂಡು ತುರ್ತುಸ್ಥಿತಿಯ ವಿರುದ್ಧ ದೇಶಾದ್ಯಂತ ಹೋರಾಟ ನಡೆಯುತ್ತಿದೆ, ನಮ್ಮೂರಲ್ಲಿ ಯಾಕಿಲ್ಲ? ಎಂದು ಚರ್ಚಿಸುತ್ತಿದ್ದೆವು. ನಾವೂ ಏನಾದರೂ ಮಾಡೋಣವೆಂದು ಭಾವಿಸಿ, ವಿದ್ಯಾರ್ಥಿ ಕ್ರಿಯಾಸಮಿತಿ ರಚಿಸಿ ಅನಂತಕುಮಾರರನ್ನು ಕಾರ್ಯದರ್ಶಿಗಳನ್ನಾಗಿ ಮಾಡಿದೆವು. ಸಾಕಷ್ಟು ನಿರ್ಬಂಧಗಳ ನಡುವೆಯೂ ನೂರಾರು ವಿದ್ಯಾರ್ಥಿಗಳನ್ನು ಸೇರಿಸಿ, ದೊಡ್ಡ ಹೋರಾಟ ಮಾಡಿದೆವು. ಪೊಲೀಸರು ಲಾಠಿಚಾರ್ಜ್ ಮಾಡಿದರು. ನನ್ನ ಕಣ್ಣೆದುರಿನಲ್ಲಿಯೇ ಪೊಲೀಸರು ಅನಂತಕುಮಾರರನ್ನು ಬಂಧಿಸಿ ಕರೆದುಕೊಂಡು ಹೋದರು. ಇದರಿಂದಾಗಿ, ಅವರ ಒಂದು ವರ್ಷದ ವಿದ್ಯಾರ್ಥಿಜೀವನ ವ್ಯರ್ಥವಾಯಿತು. ನಂತರ ಅನಂತಕುಮಾರ್ ಆರ್ಟ್ಸ್ ಕಾಲೇಜಿನಲ್ಲಿ ಕಾನೂನಿನ ವಿದ್ಯಾರ್ಥಿಯಾದರು. ನಾನು ಅವರಲ್ಲಿ ನಾಯಕತ್ವ ಗುಣಗಳನ್ನು ಆ ದಿನಗಳಲ್ಲಿಯೇ ನೋಡಿದ್ದೆ. ಆಗಲೇ ಅವರು ಕಾಶ್ಮೀರದ ಬಗ್ಗೆ ಭಾಷಣ ಮಾಡುತ್ತಿದ್ದರು. “ಹುಬ್ಬಳ್ಳಿಯಲ್ಲಿರುವ ಇವನು ಕಾಶ್ಮೀರದ ಬಗ್ಗೆ ಮಾತನಾಡುತ್ತಾನೆ” ಎಂದು ನಾವು ತಮಾಷೆ ಮಾಡುತ್ತಿದ್ದೆವು. ಆದರೆ ಈಗ ಅವರ ದೂರದೃಷ್ಟಿಯ ಮಹತ್ವದ ಅರಿವಾಗುತ್ತಿದೆ.

ಅನಂತಕುಮಾರರು ಗಂಭೀರವಾಗಿ ರಾಜಕಾರಣ ಮತ್ತು ಜನಸೇವೆ ಮಾಡಿದರು. ಆದರೆ ಅಷ್ಟೇ ಸರಳವಾಗಿ ಹಾಸ್ಯಪ್ರಜ್ಞೆಯಿಂದ ಜನರೊಡನೆ ವರ್ತಿಸಿದರು. ನಮ್ಮ 30-40 ವರ್ಷಗಳ ಒಡನಾಟದಲ್ಲಿ ಅವರು ಒಂದು ದಿನವೂ ಚಿಂತಾಕ್ರಾಂತರಾಗಿದ್ದುದನ್ನು ನಾವು ಕಾಣಲಿಲ್ಲ. ಎಂತಹ ಪರಿಸ್ಥಿತಿಯನ್ನೂ ಸ್ಥಿತಪ್ರಜ್ಞೆಯಿಂದ ನಗುನಗುತ್ತಾ ಎದುರಿಸುವ ಕಲೆ ಅವರಿಗಿತ್ತು. “ಯಾವಾಗಲೂ ನಗುನಗುತ್ತ ಇರುತ್ತೀರಲ್ಲ, ಇದರ ರಹಸ್ಯವೇನು?” ಎಂದು ನಾನೊಮ್ಮೆ ಕೇಳಿದಾಗ, ಚಿಂತಿಸಿ ಫಲವೇನು, ಸಮಸ್ಯೆಗಳನ್ನು ಬಗೆಹರಿಸಲು ಏನು ಮಾಡಬೇಕೋ ಅದನ್ನು ಮಾಡಬೇಕಲ್ಲವೇ? ಎಂದು ಅವರು ಉತ್ತರಿಸಿದ್ದರು.

ನನ್ನ ಬಗ್ಗೆ ವಿಶೇಷ ಪ್ರೀತಿ ಹೊಂದಿದ್ದ ಅನಂತಕುಮಾರರು ಬಿಜೆಪಿಗೆ ಬರುವಂತೆ ಆಗಿಂದಾಗ ನನ್ನನ್ನು ಒತ್ತಾಯಿಸುತ್ತಿದ್ದರೂ ನಾನು ಒಪ್ಪಿರಲಿಲ್ಲ. ಕೊನೆಗೆ ಅವರ ಪ್ರೀತಿಯ ಗಾಳದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೆ ಸೇರಬೇಕಾಯಿತು. ಅವರು ಮಂತ್ರಿಯಾಗಿದ್ದಾಗಲೂ ನನ್ನೊಂದಿಗೆ ಆತ್ಮೀಯ ಸ್ನೇಹಿತನಂತೆಯೇ ನಡೆದುಕೊಂಡಿದ್ದಾರೆ.

ಕರ್ನಾಟಕದ ಮತ್ತು ಬೆಂಗಳೂರಿನ ಎಲ್ಲಾ ಕಾರ್ಯಗಳಿಗೆ ಕೇಂದ್ರದ ಸಹಕಾರ ಒದಗಿಸುವಲ್ಲಿ ಅನಂತಕುಮಾರರು ಪ್ರಮುಖ ಪಾತ್ರ ವಹಿಸಿದ್ದರು. ಅಂದಿನ ಪ್ರಧಾನಿ ವಾಜಪೇಯಿಯವರು ಅನಂತಕುಮಾರರಿಗೆ ಆತ್ಮೀಯರಾಗಿದ್ದುದರಿಂದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ, ನಮ್ಮ ಮೆಟ್ರೋ, ಹುಬ್ಬಳ್ಳಿಯ ನೈಋತ್ಯ ರೈಲ್ವೆ ವಿಭಾಗ, ಕೃಷ್ಣಾ ಮೇಲ್ದಂಡೆ ಯೋಜನೆ, ಕಾವೇರಿ ಜಲವಿವಾದ ಮುಂತಾದ ವಿಷಯಗಳಲ್ಲಿ ಕರ್ನಾಟಕದ ಪರ ನಿರ್ಧಾರಗಳನ್ನು ತಗೆದುಕೊಳ್ಳಲು ಯಶಸ್ವಿಯಾದರು. ರಾಜ್ಯದ ನೆಲ-ಜಲ ವಿಚಾರದಲ್ಲಿಯೂ ಕರ್ನಾಟಕದ ಪರವಾಗಿ ದೃಢವಾಗಿ ನಿಂತುಕೊಂಡರು. 2015ರಲ್ಲಿ ಕೃಷ್ಣ ಟ್ರಿಬ್ಯೂನಲ್ ವಿಚಾರದಲ್ಲಿ ತೆಲಂಗಾಣ ಮತ್ತು ಆಂಧ್ರಗಳು ತಗಾದೆ ತೆಗೆದಿದ್ದವು. ಆಗ ಕೇಂದ್ರವು ಕರ್ನಾಟಕದ ವಿರುದ್ಧ ಆದೇಶವೊಂದನ್ನು ಹೊರಡಿಸುತ್ತಿರುವ ಮುನ್ಸೂಚನೆ ದೊರೆತು ಅದರ ಸಲುವಾಗಿ ನಾನು ಮತ್ತು ಯಡಿಯೂರಪ್ಪನವರು ದಿಲ್ಲಿಗೆ ಹೋಗಿ ಅನಂತಕುಮಾರರನ್ನು ಭೇಟಿಯಾಗಿದ್ದೆವು. ಆಗ ಅವರು ಸಂಬಂಧಿಸಿದ ಇಲಾಖೆಯ ಕಾರ್ಯದರ್ಶಿಯನ್ನು ಕರೆಸಿ ಆದೇಶವನ್ನು ಬದಲಾಯಿಸುವಂತೆ ನಿಷ್ಠುರವಾಗಿ ನಿರ್ದೇಶನ ನೀಡಿದ್ದಲ್ಲದೆ ಕೇಂದ್ರವು ನ್ಯಾಯಾಲಯಗಳಲ್ಲಿ ಕರ್ನಾಟಕದ ಪರವಾಗಿ ನಿಲುವು ತೆಗೆದುಕೊಳ್ಳುವಂತೆ ಮಾಡಿದರು.

ನಾವಿಂದು ಒಬ್ಬ ಒಳ್ಳೆಯ ಆಡಳಿತಗಾರನನ್ನು ಕಳೆದುಕೊಂಡಿದ್ದೇವೆ. ಅವರು ಮಾಡಿರುವ ಕೆಲಸಗಳು ಅವರನ್ನು ನಮ್ಮ ನಡುವೆ ಜೀವಂತವಾಗಿರಿಸಿವೆ. ಈ ಕೆಲಸಗಳು ಮುಂದುವರೆಯುತ್ತಿರುವುದನ್ನು ನೋಡಿದಾಗ ಅವರು ನಮ್ಮ ನಡುವೆ ಇಲ್ಲ ಎಂಬ ಭಾವನೆಯೇ ಬರುವುದಿಲ್ಲ. ಅವರು ಮಾಡಿರುವ ಕೆಲಸಗಳೇ ನಮಗೆ ಪ್ರೇರಣೆ. ಅವುಗಳನ್ನು ಮುಂದುವರಿಸಿಕೊಂಡು ಹೋಗಲು ಅನಂತಕುಮಾರ್ ಪ್ರತಿಷ್ಠಾನಕ್ಕೆ ನಮ್ಮ ಸರ್ಕಾರದ ಸಂಪೂರ್ಣ ಸಹಕಾರವಿದೆ. ನನ್ನ ಆತ್ಮೀಯ ಮಿತ್ರ, ನನ್ನ ಮೊದಲ ಸಾರ್ವಜನಿಕ ಹೋರಾಟಗಾರ, ಜಗಮೆಚ್ಚಿದ, ಜನಮೆಚ್ಚಿದ ನಾಯಕ, ಭಾರತದ ಮಹೋನ್ನತ ಪುತ್ರ ಅನಂತಕುಮಾರ್ ಅವರು ಸದಾಕಾಲ ನಮ್ಮೆಲ್ಲರಿಗೂ ಸದಾ ಪ್ರೇರಣೆಯನ್ನು ನೀಡುತ್ತಿರುತ್ತಾರೆ. ★




ಅನಂತಪಥ ಮಾಸಪತ್ರಿಕೆಯ 22 ನೇ ಸಂಚಿಕೆಯನ್ನು ಕರ್ನಾಟಕ ಸರ್ಕಾರದ ಗೃಹ ಸಚಿವರಾದ ಶ್ರೀ ಆರಗ ಜ್ಞಾನೇಂದ್ರ ಅವರು 22 ಏಪ್ರಿಲ್ 2022 ರಂದು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ.ವಿ. ಕೃಷ್ಣಭಟ್, ಅದಮ್ಯಚೇತದ ಮುಖ್ಯಸ್ಥೆ ಡಾ. ತೇಜಸ್ವಿನಿ ಅನಂತಕುಮಾರ್, ಪತ್ರಕರ್ತ ಶ್ರೀ ಆರ್. ಕೆ ಮಟ್ಟೂ, ಚಿತ್ರನಟ ಶ್ರೀ ಪ್ರಕಾಶ್ ಬೆಳವಾಡಿ, ಲೇಖಕಿ ಶ್ರೀಮತಿ ಸಹನಾ ವಿಜಯಕುಮಾರ್, ಪತ್ರಿಕೆಯ ಸಂಪಾದಕರಾದ ಶ್ರೀ ಟಿ.ಎಸ್. ಗೋಪಾಲ್ ಹಾಗೂ ಸಹ ಸಂಪಾದಕರಾದ ಶ್ರೀ ಜನಾರ್ದನ ತುಂಗ ಉಪಸ್ಥಿತರಿದ್ದರು.

# ‘ಕಾರ್ಮಿಕ ಬಂಧು ಅನಂತಕುಮಾರ್’

ಅನುಭವಕಥನ: ಶ್ರೀ ರಾಮಕೃಷ್ಣ ಪೂಂಜಾ

ನಿರೂಪಣೆ: ಕೆ. ಜನಾರ್ದನ ತುಂಗ


“1967ರಲ್ಲಿ ಪ್ರಾರಂಭವಾಗಿ ಶೇ ನೂರರಷ್ಟು ಸದಸ್ಯತ್ವ ಹೊಂದಿದ್ದ ನಮ್ಮ ವಿಜಯಾ ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಷನ್ 1987ರ ಹೊತ್ತಿಗೆ ವಿಜಯಾ ಬ್ಯಾಂಕಿನ ಆಡಳಿತ ವರ್ಗ ಮತ್ತು ಕಮ್ಯೂನಿಸ್ಟ್ ಯೂನಿಯನ್ನುಗಳ ಅಪವಿತ್ರ ಮೈತ್ರಿಯಿಂದಾಗ ಅಸ್ತಿತ್ವದ ಪ್ರಶ್ನೆಯನ್ನು ಎದುರಿಸುತ್ತಿತ್ತು. ಮುಂದಿನ ದಾರಿ ಕಾಣದೆ ನಾವು ನಿರಾಶರಾಗಿದ್ದೆವು. ಈ ಸಂದರ್ಭದಲ್ಲಿ ಶ್ರೀ ಕೆ ವಿ ಶ್ರೀನಿವಾಸ ಭಟ್ಟರು ನಮ್ಮನ್ನು ಅನಂತಕುಮಾರರಿಗೆ ಪರಿಚಯಿಸಿಕೊಟ್ಟರು. ಅನಂತಕುಮಾರರ ಸಂಪರ್ಕದಿಂದ ನಮ್ಮ ಸಂಘದಲ್ಲಿ ಭವಿಷ್ಯದ ಭರವಸೆ ಮೂಡಿತು. 1987ರಲ್ಲಿ ಶೇ 6ಕ್ಕೆ ಕುಸಿದಿದ್ದ ನಮ್ಮ ಸದಸ್ಯತ್ವ ಮುಂದಿನ ಮೂವತ್ತು ವರ್ಷಗಳಲ್ಲಿ ಶೇ 45ಕ್ಕೇರಿತು. ಅವರ ಹೆಸರಿನ ಬಲದಿಂದಲೇ ನಾವು ಅನೇಕ ಸಾಧನೆಗಳನ್ನು ಮಾಡಿದೆವು” ಎಂದು ಇಂದು ಬ್ಯಾಂಕ್ ಆಫ್ ಬರೋಡ ಎಂಪ್ಲಾಯೀಸ್ ಸಂಘ ಎಂದು ಕರೆಯಿಸಿಕೊಳ್ಳುತ್ತಿರುವ ಕಾರ್ಮಿಕ ಸಂಘದ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ಪೂಂಜಾ ಭಾವುಕರಾಗಿ ನೆನಪಿಸಿಕೊಳ್ಳುತ್ತಾರೆ.




ಶ್ರೀ ರಾಮಕೃಷ್ಣ ಪೂಂಜಾರವರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಲ್ ಕಾಲೇಜ್ ಯೂನಿಯನ್ನುಗಳ ಸಂಘದ ಅಧ್ಯಕ್ಷರಾಗಿದ್ದವರು. 1975ರಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಅತಿ ದೊಡ್ಡ ಸಮಾವೇಶವನ್ನು ಮಂಗಳೂರಿನಲ್ಲಿ ಏರ್ಪಡಿಸಿದ್ದರು. ವಿದ್ಯಾಭ್ಯಾಸದ ನಂತರ ವಿಜಯಾ ಬ್ಯಾಂಕಿನಲ್ಲಿ ಉದ್ಯೋಗಕ್ಕೆ ಸೇರಿಕೊಂಡ ಅವರು ಸಹಜವಾಗಿಯೇ ಭಾರತೀಯ ಮಜ್ದೂರ್ ಸಂಘಕ್ಕೆ ಸಂಯೋಜಿತವಾಗಿದ್ದ ವಿಜಯಾ ಬ್ಯಾಂಕ್ ಎಂಪ್ಲಾಯೀಸ್ ಅಸೋಸಿಯೇಷನ್ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1977ರಲ್ಲಿ ಭಾರತೀಯ ಮಜ್ದೂರ್ ಸಂಘದ ವಿಜಯವಾಡ ಘಟಕದ ಉಪಾಧ್ಯಕ್ಷರಾಗಿ ಆಯ್ಕೆಯಾದ ಅವರು ನಂತರ ಸಂಘದ ಕರ್ನಾಟಕ ಘಟಕದ ಅಧ್ಯಕ್ಷರಾಗಿ ಎರಡು ಅವಧಿಗಳಲ್ಲಿ ಕಾರ್ಯನಿರ್ವಹಿಸಿದರು. 1987ರಲ್ಲಿ ನೆಲ ಕಚ್ಚಿದ್ದ ತಮ್ಮ ಸಂಘದ ನಾಯಕತ್ವ ವಹಿಸಿಕೊಂಡಾಗ ಎಲ್ಲ ಕಡೆಯೂ ನಿರಾಶೆಯೇ ಅವರಿಗೆ ಕಾದಿತ್ತು. ಅಂತಹ ಸಂದರ್ಭದಲ್ಲಿ ತಮ್ಮ ಕೈಹಿಡಿದ ಅನಂತಕುಮಾರರನ್ನು ನೆನಪಿಸಿಕೊಳ್ಳುವಾಗ ಅವರ ಕಣ್ಣುಗಳು ಆರ್ದ್ರವಾಗುತ್ತವೆ.

“ನಿರಾಶೆಯ ಕಾರ್ಮೋಡದ ನಡುವೆ ಭರವಸೆಯ ಮಿಂಚಾಗಿ ಅನಂತಕುಮಾರರು ಕಾಣಿಸಿಕೊಂಡಾಗ ಅವರು ಅಧಿಕಾರದಲ್ಲಿರಲಿಲ್ಲ. ಆದರೆ, ಅವರ ಜೀವನೋತ್ಸಾಹ, ಕರ್ತವ್ಯಶ್ರದ್ಧೆ, ಸೋಲಿಗೆ ಎದೆಗುಂದದ ಮನೋಭಾವ, ಆತ್ಮವಿಶ್ವಾಸ, ಭವಿಷ್ಯದ ಬಗ್ಗೆ ಭರವಸೆ ಮುಂತಾದ ಗುಣಗಳು ನಮ್ಮನ್ನೂ ಸವರಿಬಿಟ್ಟವು. ಅವರು ನಮ್ಮ ಬೆಂಬಲಕ್ಕೆ ನಿಂತಿದ್ದಾರೆ ಎಂಬ ವಿಷಯವೇ ನಮಗೆ ಪರಿಣಾಮಗಳನ್ನು ಲೆಕ್ಕಿಸದೆ ಮುನ್ನುಗ್ಗುವ ಛಲವನ್ನು ನೀಡಿತು. ವಿಜಯಾ ಬ್ಯಾಂಕಿನ ಕಾರ್ಮಿಕರ ಹಿತರಕ್ಷಣೆಗೆ ಅವರು ನೀಡಿದ ಬೆಂಬಲವನ್ನು ಕೆಲವು ಘಟನೆಗಳ ಮೂಲಕವೇ ವಿವರಿಸುವುದು ಸೂಕ್ತ” ಎಂದು ಶ್ರೀ ಪೂಂಜಾ ಹೇಳಿದರು. ಕೆಲವು ಘಟನೆಗಳನ್ನು ಅವರ ಮಾತುಗಳಲ್ಲೇ ಓದಿ.





ಇಪ್ಪತ್ತೈದು ವರ್ಷಗಳ ಹಿಂದೆ ವಿಜಯಾ ಬ್ಯಾಂಕಿನ ಆಡಳಿತ ವರ್ಗವು ತನಗೆ ಅನುಕೂಲಕರವಾಗಿದ್ದ ಸಂಘದೊಂದಿಗೆ ಒಪ್ಪಂದ ಮಾಡಿಕೊಂಡು ಕಾರ್ಮಿಕರಿಗೆ ಪ್ರತಿಕೂಲವಾದ ವರ್ಗಾವಣೆ ನಿಯಮವನ್ನು ಜಾರಿಗೆ ತಂದಿತು. ನಮ್ಮ ಸಂಘವು ಇದನ್ನು ವಿರೋಧಿಸಿತು. ಆಗ ಆಡಳಿತವರ್ಗವು ನಮ್ಮ ಸಂಘದ ಮಾನ್ಯತೆಯನ್ನು ರದ್ದುಗೊಳಿಸುವ ಬೆದರಿಕೆ ಹಾಕಿತು. ಇದನ್ನು ತಿಳಿದ ಅನಂತಕುಮಾರ್ ಬ್ಯಾಂಕಿನ ಅಧ್ಯಕ್ಷರಿಗೆ ನೇರವಾಗಿ ಕರೆಮಾಡಿ, ನಮ್ಮ ಸಂಘವನ್ನು ಸರಕಾರದ ಪ್ರತಿನಿಧಿ ಎಂದು ಪರಿಗಣಿಸಿ ವ್ಯವಹರಿಸಬೇಕೆಂದು ತಿಳಿಸಿದರು. ಇದರಿಂದ ನಮ್ಮ ಅಸ್ತಿತ್ವಕ್ಕೆ ಒದಗಿದ ದೊಡ್ಡ ಅಪಾಯ ಸುಲಭದಲ್ಲಿ ತಪ್ಪಿತು.

ಆಡಳಿತ ವರ್ಗದೊಡನೆ ನಮ್ಮ ಪರವಾಗಿ ಮಾತನಾಡಲು ಅನಂತಕುಮಾರರು ಬಂದಾಗಲೆಲ್ಲ ವಿಜಯಾ ಬ್ಯಾಂಕ್ ಎಂಪ್ಲಾಯೀಸ್ ಯೂನಿಯನ್ ಜಿಂದಾಬಾದ್ ಎಂದು ಘೋಷಣೆ ಕೂಗುತ್ತಲೇ ಹೊರಗೆ ಬರುತ್ತಿದ್ದರು. ಅಷ್ಟರ ಮಟ್ಟಿಗೆ ಅವರು ಕಾರ್ಮಿಕ ವರ್ಗದ ಜೊತೆ ತಮ್ಮನ್ನು ಗುರುತಿಸಿಕೊಂಡಿದ್ದರು. ನಾವು ಸಾಮಾನ್ಯರಲ್ಲಿ ಸಾಮಾನ್ಯರು. ಆದರೆ ಅನಂತಕುಮಾರರ ದೃಷ್ಟಿಯಲ್ಲಿ ನಮ್ಮಂತಹ ಸಾಮಾನ್ಯರಿಗೆ ಆದ್ಯತೆ.

ಒಮ್ಮೆ ನಾವು ಕಾರ್ಯನಿಮಿತ್ತ ಅನಂತಕುಮಾರರ ದೆಹಲಿ ನಿವಾಸಕ್ಕೆ ಹೋಗಿದ್ದೆವು. ಆಗ ಅವರು ನಾಗರಿಕ ವಿಮಾನಯಾನ ಖಾತೆಯ ಸಚಿವರಾಗಿದ್ದರು. ನಾವು ಹೋದಾಗ ಅನೇಕ ದೊಡ್ಡ ವ್ಯಕ್ತಿಗಳು ಅವರ ಭೇಟಿಗಾಗಿ ಕಾಯುತ್ತಿದ್ದರು. ಇವರೆಲ್ಲ ಹೋದ ಮೇಲೆಯೇ ನಮಗೆ ಅವರ ಭೇಟಿ ಎಂದು ನಾವು ಭಾವಿಸಿದ್ದೆವು. ನಮಗೆ ಅಚ್ಚರಿಯಾಗುವಂತೆ ನಮ್ಮನ್ನೇ ಮೊದಲು ಮಾತುಕತೆಗೆ ಕರೆದರು. ಯಾವುದೇ ಎತ್ತರದಲ್ಲಿದ್ದರೂ ಯಾವುದೇ ಸಮಯದಲ್ಲಿಯೂ ಸಾಮಾನ್ಯ ಜನರ ಸಮಸ್ಯೆಗಳಿಗೆ ಆದ್ಯತೆ ನೀಡುವ ಅವರ ಸರಳತೆಯನ್ನು ನೋಡಿ ನಾವು ಅವಾಕ್ಕಾಗಿದ್ದೆವು.

ಇನ್ನೊಮ್ಮೆ, ಅಂದಿನ ಹಣಕಾಸು ಸಚಿವರಾಗಿದ್ದ ಶಿವಸೇನೆಯ ಬಾಳಾಸಾಹೇಬ್ ವಿಖೆ ಪಾಟೀಲರನ್ನು ಭೇಟಿಯಾಗಲು ಅನಂತಕುಮಾರರ ನೆರವನ್ನು ಕೇಳಿದೆವು. ಭೇಟಿಗೆ ಅವರೇ ನಮ್ಮನ್ನು ಕರೆದುಕೊಂಡು ಹೋದರು. ಹೊರಡುವ ಮೊದಲು ನಮ್ಮ ಅಹವಾಲು ಪತ್ರವನ್ನು ಓದಿ ಅದನ್ನು ಕೆಲವೇ ಅಂಶಗಳಿಗೆ ಇಳಿಸುವಂತೆ ಸಲಹೆ ನೀಡಿದರು. ಸಚಿವರೊಂದಿಗೆ ಮಾತನಾಡುತ್ತ ನಮ್ಮ ಮೊದಲಿನ ಅಹವಾಲು ಪತ್ರದ ಎಲ್ಲ ವಿವರಗಳನ್ನೂ ಪರಿಣಾಮಕಾರಿಯಾಗಿ ವಿವರಿಸಿದರು. ಈ ಘಟನೆ ಮುಂದಿನ ದಿನಗಳಲ್ಲಿ ಹಿರಿಯ ಅಧಿಕಾರಿಗಳ ಜೊತೆ ಅಥವಾ ಸರಕಾರಿ ಅಧಿಕಾರಿಗಳ ಜೊತೆ ವ್ಯವಹರಿಸುವಾಗ ಮಾರ್ಗದರ್ಶಿಯಾಗಿ ಒದಗಿ ಬಂದಿತು. ಆ ದಿನ ಅವರ ಮನೆಯಲ್ಲಿಯೇ ನಮಗೆ ಊಟ ತಿಂಡಿಯ ವ್ಯವಸ್ಥೆ ಮಾಡಿ ಆತ್ಮೀಯತೆಯಿಂದ ನಡೆಸಿಕೊಂಡದ್ದನ್ನು ನಾವೆಂದಿಗೂ ಮರೆಯಲಾರೆವು. ಒಮ್ಮೆ ನಮಗಾಗಿ ಅದ್ವಾನಿಯವರ ಭೇಟಿಯನ್ನು ಭೋಪಾಲಿನಲ್ಲಿ ನಿಗದಿಪಡಿಸಿದ್ದಲ್ಲದೆ, ನಮ್ಮ ಭೋಪಾಲಿನ ಪ್ರಯಾಣ ಮತ್ತು ವಾಸ್ತವ್ಯದ ವ್ಯವಸ್ಥೆಯನ್ನೂ ನೋಡಿಕೊಂಡಿದ್ದರು.

ಒಮ್ಮೆ ಕೇಂದ್ರ ಕಾರ್ಮಿಕ ಸಚಿವರಾಗಿದ್ದ ಶ್ರೀ ಸಾಹಿಬ್ ಸಿಂಗ್ ವರ್ಮಾ ಬೆಂಗಳೂರಿಗೆ ಆಗಮಿಸಿ ಕುಮಾರಕೃಪಾ ಅತಿಥಿಗೃಹದಲ್ಲಿ ಉಳಿದುಕೊಂಡಿದ್ದರು. ಅವರನ್ನು ಭೇಟಿಯಾಗಲು ನಾವು ಅನಂತಕುಮಾರರ ಮೂಲಕ ಪ್ರಯತ್ನಿಸಿದೆವು. ಅನಂತಕುಮಾರರೂ ನಮ್ಮೊಡನೆ ಬಂದಿದ್ದರು. ನಮ್ಮ ಕೈಯಲ್ಲಿ ಯಾವುದೇ ಪುಷ್ಪಗುಚ್ಛವಿಲ್ಲದ್ದನ್ನು ಗಮನಿಸಿ ಅವರೇ ಒಂದು ಪುಷ್ಪಗುಚ್ಛದ ಏರ್ಪಾಡು ಮಾಡಿದ್ದರು. ಯಾವುದೇ ಸಂದರ್ಭದಲ್ಲಿಯೂ ಯಾವುದೇ ಲೋಪವಾಗದಂತೆ ನಮ್ಮನ್ನು ಮುನ್ನಡೆಸಿದ್ದುದು ಅವರ ದೊಡ್ಡಗುಣ.

ಪುಟ 7 ರಲ್ಲಿ ಮುಂದುವರೆದಿದೆ

# ‘ದೇಶ ರಕ್ಷಣೆಯಲ್ಲಿ ಕ್ಷಾತ್ರ ಅನಿವಾರ್ಯ’



**ಶ್ರೀಮತಿ ಸಹನಾ ವಿಜಯಕುಮಾರ್**
ಕಶೀರ ಕಾದಂಬರಿಯ ಲೇಖಕಿ

ಕಾಶ್ಮೀರದ ವಿಷಯದಲ್ಲಿ ತಪ್ಪು ಘಟಿಸಿ ಹೋಗಿದೆ, ಹಾಗಾಗಿ, ಕಾಶ್ಮೀರದ ವಿಷಯದಲ್ಲಿ ನಮ್ಮಿಂದಾದ ತಪ್ಪುಗಳು ಯಾವುವು, ಅವುಗಳನ್ನು ಸರಿಪಡಿಸಲು ನಮ್ಮ ಕರ್ತವ್ಯಗಳೇನು ಎಂಬ ಬಗ್ಗೆ ಚಿಂತಿಸಬೇಕಾಗಿರುವುದು ನಾವು ಮಾಡಬೇಕಾದ ತತ್‌ಕ್ಷಣದ ಕೆಲಸ. ಅಂತಹ ಮತ್ತೊಂದು ಕಾಶ್ಮೀರ ಸಂಭವಿಸದ ಹಾಗೆ ನಾವೇನು ಮಾಡಬಹುದು, ಇತಿಹಾಸದಿಂದ ನಾವು ಕಲಿತ, ಕಲಿಯಬೇಕಾದ ಪಾಠಗಳೇನು ಎಂಬ ವಿಚಾರಗಳ ಬಗ್ಗೆ ಗಮನ ಹರಿಸುವುದು ಕೂಡ ಅಗತ್ಯ.

ಕಾಶ್ಮೀರದ ಪ್ರವಾಸಿಗರನ್ನು ಅಲ್ಲಿನ ಜನರು ‘ಇಂಡಿಯಾದಿಂದ ಬಂದವರು’ ಎಂದು ಗುರುತಿಸುವುದು ಸಾಮಾನ್ಯವಾಗಿ ಎಲ್ಲರ ಅನುಭವಕ್ಕೆ ಬಂದಿರುತ್ತದೆ. ನಮ್ಮ ಮಕ್ಕಳು ವಿದೇಶದಲ್ಲಿ, ಅಂದರೆ ಭಾರತದಲ್ಲಿ ಓದುತ್ತಿದ್ದಾರೆ ಎಂದು ಅವರು ಹೇಳುತ್ತಾರೆ. ರಾಜಾ ಹರಿಸಿಂಗ್ ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸಿದಾಗ ಕಾಶ್ಮೀರದ ಮುಸ್ಲಿಮರ ಅಭಿಮತವನ್ನು ತಿಳಿದುಕೊಳ್ಳದೆ ಒಪ್ಪಂದಕ್ಕೆ ಸಹಿ ಹಾಕಿದ ಎಂದು ಅಲ್ಲಿನ ಜನ ಭಾವಿಸುತ್ತಾರೆ. ಹರಿಸಿಂಗ್, ಜಮ್ಮುವಿನ ಡೋಗ್ರಾ ಸಮುದಾಯಕ್ಕೆ ಸೇರಿದವನು. ಆದುದರಿಂದ ಈ ಒಪ್ಪಂದವನ್ನು ತಮ್ಮ ಮೇಲೆ ಹೇರಲಾಗಿದೆ ಎಂಬುದು ಪ್ರತಿಯೊಬ್ಬ ಕಾಶ್ಮೀರಿಯ ಭಾವನೆ. ಅದಕ್ಕೆ ತಕ್ಕಂತೆ, ಇಂದಿನ ಪೀಳಿಗೆಯ ಯುವಕರಿಗೆ ಇಂತಹದೊಂದು ದೊಡ್ಡ ಸಾಮೂಹಿಕ ವಲಸೆ ನಡೆದಿತ್ತು ಎಂಬ ಬಗ್ಗೆಯೇ ಅರಿವಿಲ್ಲ. ಎಲ್ಲೋ ಕೆಲವು ಹಿಂದೂಗಳಿದ್ದರು, ಅವರು ಇಲ್ಲಿಂದ ವಲಸೆ ಹೋದರು ಎಂಬುದಷ್ಟೇ ಅವರಿಗೆ ತಿಳಿದಿರುವ ವಿಚಾರ. ಕಾಶ್ಮೀರಕ್ಕೆ ಸಾವಿರಾರು ವರ್ಷಗಳ ಚರಿತ್ರೆಯಿದೆ ಎಂಬ ಬಗ್ಗೆಯೂ ಅವರಿಗೆ ತಿಳುವಳಿಕೆಯಿಲ್ಲ.

ಭಾರತೀಯರಾದರೂ ಕಾಶ್ಮೀರದ ವೈಭವೋಪೇತ ಇತಿಹಾಸದ ಕುರಿತು ಓದಿದ್ದಾರೆಯೆ? ಕಾಶ್ಮೀರದ ರಾಜ, ಲಲಿತಾದಿತ್ಯ ತನ್ನ ರಾಜ್ಯವನ್ನು ಚೀನಾ ದೇಶದವರೆಗೂ ವಿಸ್ತರಿಸಿದ್ದ, ಅವನಷ್ಟೇ ಒಳ್ಳೆಯ ಜೈನುಲ್ಲಾಬದೀನ್ ಎಂಬ ಮುಸ್ಲಿಂ ರಾಜ ಕಾಶ್ಮೀರದಲ್ಲಿದ್ದ ಎಂಬ ಸಂಗತಿಗಳ ಬಗ್ಗೆ ನಾವು ಪಠ್ಯಪುಸ್ತಕಗಳಲ್ಲಿ ಓದುವುದಿಲ್ಲ. ಕಾಶ್ಮೀರದ ಮಕ್ಕಳಿಗೆ ಮಾತ್ರವಲ್ಲ, ಕರ್ನಾಟಕದ ಮಕ್ಕಳಿಗೂ ಕಾಶ್ಮೀರದ ಇತಿಹಾಸದ ಪರಿಚಯವಾಗಬೇಕು. ಪಠ್ಯಗಳಲ್ಲಿ ಲಲಿತಾದಿತ್ಯನ ಬಗ್ಗೆ ಮತ್ತು ಕಲ್ಹಣನು ಕಾಶ್ಮೀರದ ಇತಿಹಾಸವನ್ನು ಕುರಿತು ವಿಸ್ತಾರವಾಗಿ ಬರೆದ ರಾಜ ತರಂಗಿಣಿಯ ಬಗ್ಗೆ ಅಧ್ಯಾಯವಿರಬೇಕು. ದೇಶದ ಯಾವುದೇ ಮೂಲೆಗೆ ಹೋಗಿ ಅಲ್ಲಿ ಒಂದು ದೇವಾಲಯವನ್ನು ಕಂಡರೆ ಅದು ಎಷ್ಟು ಹಳೆಯದು, ಅದನ್ನು ಕಟ್ಟಿದವರು ಯಾರು, ಅದನ್ನು ಧ್ವಂಸಗೊಳಿಸಲಾಗಿದೆಯೆ, ಅದರ ಜಾಗದಲ್ಲಿ ಬೇರೆ ಪ್ರಾರ್ಥನಾ ಮಂದಿರ ನಿರ್ಮಾಣವಾಗಿದೆಯೆ ಮುಂತಾದ ವಿಷಯಗಳ ಬಗ್ಗೆ ಸಂಶೋಧನಾತ್ಮಕವಾಗಿ ತಿಳಿದುಕೊಳ್ಳುವ ಪ್ರವೃತ್ತಿ ಇಂದು ಯುವಕರಲ್ಲಿ ಹೆಚ್ಚಾಗುತ್ತಿದೆ. ಕಾಶ್ಮೀರದಲ್ಲಿಯೂ ಅವಂತಿಪುರದಲ್ಲಿ ಅವಂತಿವರ್ಮ ಕಟ್ಟಿಸಿದ ದೇವಾಲಯ, ಲಲಿತಾದಿತ್ಯ ಕಟ್ಟಿಸಿದ ಮಾರ್ತಾಂಡ ದೇವಾಲಯ ಮುಂತಾದ ನೂರಾರು ದೇವಾಲಯಗಳು ನಾಶವಾಗಿರುವುದನ್ನು ಯುವಕರು ನೋಡಿದ್ದಾರೆ. ಮೊದಲೇ ಮಾಹಿತಿಯನ್ನು ಕಲೆ ಹಾಕಿ ನಂತರ ಸಂದರ್ಶಿಸುವ ಪ್ರವೃತ್ತಿ ಹೆಚ್ಚಾಗುತ್ತಿದೆ.

ಯುವಕರಲ್ಲಿ ಈ ರೀತಿಯಾಗಿ ಅರಿವು ಮೂಡುತ್ತಿರುವ ಸಂದರ್ಭದಲ್ಲಿ ಸರಕಾರದ ನಡೆಗಳೇ ನಮಗೆ ಅರ್ಥವಾಗುತ್ತಿಲ್ಲ. ಸರಕಾರವು ಕಾಶ್ಮೀರವನ್ನು ಒಂದು ವಿಶೇಷ ಪ್ರದೇಶ ಎಂದು ಪರಿಗಣಿಸಿದೆ. ಆದರೆ ರಾಜ್ಯಗಳ ಚುನಾವಣೆಗಳಲ್ಲಿ ಪ್ರದೇಶದ ಅಭಿವೃದ್ಧಿಯ ಬಗ್ಗೆ ನಿರ್ದಿಷ್ಟ ಪ್ರಣಾಳಿಕೆಯನ್ನು ನಿರೂಪಿಸುವಂತೆ ಕಾಶ್ಮೀರದ ಬಗ್ಗೆಯೂ ಒಂದು ನಿರ್ದಿಷ್ಟ ಕಾರ್ಯಸೂಚಿಯಿರಬೇಕು. ಇಲ್ಲದಿದ್ದರೆ ಕಾಶ್ಮೀರ ಫೈಲ್ಸ್ ಸಿನಿಮಾದಂತಹ ಬೆಳವಣಿಗೆಗಳಿಂದ ಹುಟ್ಟಿದ ಶಕ್ತಿ ಎಲ್ಲೆಲ್ಲೋ ವ್ಯಯವಾಗಿ ವ್ಯರ್ಥವಾಗುತ್ತದೆ. ನನ್ನ ಕಶೀರ ಕಾದಂಬರಿ ಬಿಡುಗಡೆಯಾದಾಗ ಅನೇಕರು ತಾವು ಯಾವ ರೀತಿಯಿಂದ ಕಾಶ್ಮೀರದ ವಿಷಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದು ಎಂದು ನನ್ನ ಸಲಹೆ ಕೇಳಿದ್ದರು. ಇದುವರೆಗೆ ಕೇವಲ ಪ್ರಶ್ನೆಗಳಿಗೆ ಸೀಮಿತವಾಗಿದ್ದ ವಿಚಾರ ಇಂದು ಕ್ರಿಯಾತ್ಮಕವಾಗತೊಡಗಿದೆ. ಆದುದರಿಂದ ಸರಕಾರವು ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಿ ಎಲ್ಲ ಶಕ್ತಿಗಳನ್ನು ಕ್ರೋಡೀಕರಿಸುವ ಕೆಲಸ ಮಾಡಬೇಕು. ಕಾಶ್ಮೀರವನ್ನು ಬೇರೆ ರಾಜ್ಯಗಳ ಸಾಲಿನಲ್ಲಿ ತಂದು ನಿಲ್ಲಿಸುವ ಕೆಲಸ ಕಾಶ್ಮೀರಿ ಹಿಂದೂಗಳಿಂದ ಮಾತ್ರ ಸಾಧ್ಯವಿಲ್ಲ. ಭಾರತೀಯರೆಲ್ಲರೂ ಕಾಶ್ಮೀರಕ್ಕೆ ಹೋಗಿ ಅಲ್ಲಿ ಕೆಲಸ ಮಾಡಬೇಕು. ಆಗ ಮಾತ್ರ ಅಲ್ಲಿ ಒಂದು ಸಮಾಧಾನಕರ ವಾತಾವರಣ ನಿರ್ಮಾಣವಾಗುವುದು ಸಾಧ್ಯ.

ಪ್ರೊ| ಪ್ರೇಮಶೇಖರ್ ಅವರು ನನಗೆ ಕಾಶ್ಮೀರ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರೂ ಆಗಿದ್ದ ವಿದ್ಯಾರ್ಥಿಯೊಬ್ಬರ ಪರಿಚಯ ಮಾಡಿಸಿದ್ದರು. 1990ರ ಜನವರಿ 19ರ ಘಟನೆ ನಡೆದಾಗ ಆತ ಚಿಕ್ಕ ಹುಡುಗನಾಗಿದ್ದ. ಆ ದಿನ ರಾತ್ರಿ ಆತನ ತಂದೆ “ನಾವು ಈ ಕೃತ್ಯಗಳಲ್ಲಿ ಭಾಗಿಯಾಗಬಾರದು, ನೀವು ಯಾರೂ ಮಸೀದಿಗೆ ಹೋಗಬೇಡಿ” ಎಂದು ತಮ್ಮ ಇಡೀ ಕುಟುಂಬಕ್ಕೆ ತಾಕೀತು ಮಾಡಿದ್ದರು ಎಂಬುದನ್ನು ಇಂದಿಗೂ ನೆನಪಿಟ್ಟುಕೊಂಡು ತನ್ನ ವಿದ್ಯಾರ್ಥಿಗಳಿಗೆ ವಿವರಿಸಲು ಪ್ರಯತ್ನಿಸುತ್ತಿದ್ದ. ಆದರೆ ಸನ್ನಿವೇಶ ಕೆಲವೊಮ್ಮೆ ಆತನಿಗೆ ಪ್ರತಿಕೂಲವಾಗುತ್ತಿತ್ತು. ಇಂತಹ ಯುವಕರನ್ನು ಗುರುತಿಸಿ ಎಲ್ಲರೂ ಒಡನಾಟ ಬೆಳೆಸಿಕೊಳ್ಳಬೇಕು.

ಕಾಶ್ಮೀರವು ಅಕ್ರೋಟು, ಸೇಬು ಮುಂತಾದ ಅನೇಕ ಉತ್ಪನ್ನಗಳಿಗೆ ಹೆಸರುವಾಸಿ. ಆದರೆ ಅವುಗಳನ್ನು ವಿಕ್ರಯ ಮಾಡಲು ಸರಿಯಾದ ಅವಕಾಶಗಳು ದೊರೆಯುತ್ತಿಲ್ಲ. ಅಲ್ಲಿನ ಯುವಕರು ಅಂದಿನ ಕಾಲದಲ್ಲಿಯೇ ಅನೇಕ ಸ್ಟಾರ್ಟ್ ಅಪ್‌ಗಳಲ್ಲಿ ಆಸಕ್ತಿ ತೋರಿಸಿದ್ದರು. ಆದರೆ ಕಲ್ಲೆಸೆಯುವ ಮಾಫಿಯಾಗಳ ದುಷ್ಕೃತ್ಯವನ್ನು ವಿಫಲಗೊಳಿಸಲು ಸರಕಾರವು ಇಂಟರ್ನೆಟ್ ಸೌಲಭ್ಯವನ್ನು ಆಗಾಗ ನಿಲ್ಲಿಸುತ್ತದೆ. ಇಂಟರ್ನೆಟ್ ಸೌಲಭ್ಯವಿಲ್ಲದೆ ಯಾವುದೇ ಸ್ಟಾರ್ಟ್ ಅಪ್ ಪ್ರಾರಂಭಿಸುವುದು ಅಸಾಧ್ಯ. ಸರಕಾರ ಈ ಕುರಿತು ಗಮನ ಹರಿಸಬೇಕು.

ಸರಕಾರವು ನಿವೃತ್ತ ಸೈನಿಕರಿಗೆ ಸೂಕ್ತ ಭತ್ಯೆಗಳೊಂದಿಗೆ ಕುಪ್ವಾರಾ, ಸೋಪೋರ್, ಬಾರಾಮುಲ್ಲಾ, ಅನಂತನಾಗ್ ಮುಂತಾದ ಕಡೆ ನೆಲೆಸಲು ಅನುಕೂಲತೆಗಳನ್ನು ಕಲ್ಪಿಸಿ ಪ್ರೋತ್ಸಾಹ ನೀಡಬೇಕು. ಇದರಿಂದ ಅಂತಹ ಸ್ಥಳಗಳಲ್ಲಿ ಭದ್ರತೆಯ ವಾತಾವರಣ ನೆಲೆಗೊಳ್ಳುತ್ತದೆ. ಕಾಶ್ಮೀರದ ವಿದ್ಯಮಾನ ನಡೆಯಲೇ ಇಲ್ಲ ಎಂದು ವಾದಿಸುವ ಬುದ್ಧಿಜೀವಿಗಳನ್ನು ಕಾಶ್ಮೀರದ ಗಡಿ ಪ್ರದೇಶಗಳಿಗೆ ಕರೆದೊಯ್ದು ಅವರಿಗೆ ಅಲ್ಲಿನ ವಾಸ್ತವದ ಪರಿಚಯ ಮಾಡಿಸಬೇಕು.

ಯಾವುದೇ ಕಾಲದಲ್ಲೂ ಪ್ರಜೆಗಳ ರಕ್ಷಣೆ, ದುಷ್ಟರ ದಮನ ಮತ್ತು ಸಂಪದಭಿವೃದ್ಧಿ ತಮ್ಮ ಕರ್ತವ್ಯ ಎಂದು ಕ್ಷತ್ರಿಯರು ಭಾವಿಸುತ್ತಿದ್ದರು. ಭಾರತವು ಸಾವಿರಾರು ವರ್ಷಗಳಿಂದ ತನ್ನ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿದ್ದರೆ ಅದಕ್ಕೆ ಭಾರತೀಯರ ಕ್ಷಾತ್ರವೇ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ. ವಿಪರ್ಯಾಸವೆಂದರೆ, ಭಾರತವು ಸ್ವತಂತ್ರವಾದ ಮೇಲೆ ನಮಗೆ ಸ್ವಾತಂತ್ರ್ಯ ದೊರೆತದ್ದೇ ಅಹಿಂಸೆಯಿಂದ, ಆದುದರಿಂದ ಅಹಿಂಸೆಯೇ ಸರಿಯಾದ ಮಾರ್ಗ ಎಂಬ ತಪ್ಪು ಪರಿಭಾಷೆ ಚಾಲ್ತಿಗೆ ಬಂದಿತು. ಹಿಂದಿನ ಕಾಲದಲ್ಲಿ ರಾಜರು ಮೊದಲು ಆತ್ಮಾಹುತಿ ನೀಡುತ್ತಿದ್ದರು. ಆದರೆ ಇಂದಿನ ನೆಹರೂ ಪ್ರಣೀತ ಆಳ್ವಿಕೆಯಲ್ಲಿ ನೇತಾರರು ತಾವು ಸುಖವಾಗಿದ್ದು ಜನರನ್ನು ಬಲಿಕೊಡುವುದು ನಡೆಯುತ್ತಿದೆ. ತಮ್ಮ ಭದ್ರತೆಗಾಗಿ ಜನರಲ್ಲಿ ಒಡಕು ಹುಟ್ಟಿಸುವುದೇ ಅವರ ಕಾರ್ಯತಂತ್ರವಾಗಿದೆ. ಇದರಿಂದ ಕ್ಷಾತ್ರ ಕ್ಷೀಣಿಸುತ್ತ ಬಂದು ಅಹಿಂಸಾತತ್ವವನ್ನು ದೌರ್ಬಲ್ಯ ಎಂದು ಎಲ್ಲರೂ ಪರಿಗಣಿಸುವಂತಾಗಿದೆ.

ಯೋಗಿ ಆದಿತ್ಯನಾಥರ ಉತ್ತರ ಪ್ರದೇಶ ಮತ್ತು ಹಿಮಂತ ಬಿಸ್ವ ಶರ್ಮರ ಅಸ್ಸಾಮಿನಲ್ಲಿ ಒಟ್ಟು 55 ದಶಲಕ್ಷ ಮುಸ್ಲಿಮರಿದ್ದರೂ ರಾಮನವಮಿ ಮತ್ತು ಹನುಮ ಜಯಂತಿಯ 950ಕ್ಕೂ ಹೆಚ್ಚು ಶೋಭಾಯಾತ್ರೆಗಳ ಸಂದರ್ಭದಲ್ಲಿ ಒಂದೇ ಒಂದು ಕಲ್ಲೆಸೆತದ ಪ್ರಕರಣ ಉಂಟಾಗಲಿಲ್ಲ. ಇವರಿಬ್ಬರೂ ರಾಜ್ಯದ ಮುಖ್ಯಮಂತ್ರಿಗಳಾಗಿ ಕ್ಷಾತ್ರವನ್ನು ಪ್ರದರ್ಶಿಸಿರುವುದರಿಂದ ಆಯಾ ರಾಜ್ಯಗಳ ಜನರು ಶಾಂತಿ ಮತ್ತು ಸುರಕ್ಷತೆಯಿಂದ ಬದುಕುವುದು ಸಾಧ್ಯವಾಗಿದೆ. ಆಡಳಿತದಲ್ಲಿ ಕ್ಷಾತ್ರಗುಣ ಅತ್ಯವಶ್ಯವಾಗಿ ಇರಬೇಕು. ನಾವು ಇಂದು ನೋಡುತ್ತಿರುವ ಜಾತ್ಯತೀತರು, ಬುದ್ಧಿಜೀವಿಗಳು ಕೆಲವು ನೂರು ವರ್ಷಗಳ ಹಿಂದೆಯೂ ಇದ್ದಿದ್ದರೆ ಭಾರತವು ಇಂದಿರುವ ಸ್ವರೂಪದಲ್ಲಿ ಉಳಿದುಕೊಳ್ಳುತ್ತಿರಲಿಲ್ಲ.

(ಪುಟ 7 ರಲ್ಲಿ ಮುಂದುವರೆದಿದೆ)

# 'ಹಿಂದೂ ಸಂಸ್ಕೃತಿಯ ಉಳಿವು ಅತ್ಯಗತ್ಯ'

- ಶ್ರೀ ಆರಗ ಜ್ಞಾನೇಂದ್ರ
ಗೃಹ ಸಚಿವರು, ಕರ್ನಾಟಕ ಸರ್ಕಾರ

ದೇಶದ ಹಲವಾರು ಸಮಸ್ಯೆಗಳು ಬಗೆಹರಿಯಬೇಕಾದರೆ ನಾವು ಎಚ್ಚರಿಕೆಯಿಂದಿರಬೇಕು. ಕುಟುಂಬದ ಚೌಕಟ್ಟನ್ನು ಮೀರಿ ದೇಶವು ನಮಗೂ ಸೇರಿದ್ದು ಮತ್ತು ದೇಶದ ಎಲ್ಲ ವಿದ್ಯಮಾನಗಳು ನಮ್ಮ ಮೇಲೂ ಪ್ರಭಾವ ಬೀರುತ್ತವೆ ಎಂದು ಯೋಚಿಸದಿದ್ದರೆ ನಮ್ಮ ಸ್ವಾತಂತ್ರ್ಯ ಉಳಿಯುವುದಿಲ್ಲ.

1947ರಲ್ಲಿ ಭಾರತ ಇಬ್ಭಾಗವಾಯಿತು ಎಂದು ಎಲ್ಲರಿಗೂ ತಿಳಿದಿದೆ. ಆದರೆ ದೇಶವು ಯಾವ ಸಿದ್ಧಾಂತದ ಮೇಲೆ ಇಬ್ಭಾಗವಾಯಿತು ಎಂಬ ಬಗ್ಗೆ ನಾವು ಚರ್ಚೆ ಮಾಡುವುದಿಲ್ಲ. ನಮ್ಮ ಜೊತೆಯಲ್ಲಿಯೇ ಬದುಕುತ್ತಿದ್ದ, ನಾವು ಸಹೋದರರೆಂದು ಭಾವಿಸಿದ್ದ ಜನರೇ ನಮಗೆ ಬೇರೆ ದೇಶ ಕೊಡಿ ಎಂದು ಕೇಳಿದಾಗ ನಮ್ಮ ನಾಯಕರು ಅಸಹಾಯಕರಾಗಿ ದೇಶ ವಿಭಜನೆಗೆ ಅವಕಾಶ ಕೊಟ್ಟರು. ನಮ್ಮ ಸಹೋದರರೊಂದಿಗೆ ಆಸ್ತಿಯನ್ನು ಹಂಚಿಕೊಳ್ಳುವುದಕ್ಕಿಂತ ಸುಲಭವಾಗಿ ದೇಶವನ್ನು ಪಾಲು ಮಾಡಿಕೊಟ್ಟರು. ಆದರೆ ವಿಭಜನೆಯ ಉದ್ದೇಶ ಈಡೇರಲಿಲ್ಲ. ಬೇರೆ ದೇಶವನ್ನು ತೆಗೆದುಕೊಂಡು ಹೋದಮೇಲೆ ಇಲ್ಲಿ ಉಳಿದಿರುವ ಜನರು ಪ್ರತಿಯೊಂದು ಊರನ್ನೂ ನಮಗೆ ಒಡೆದು ಕೊಡಿ ಎಂದು ಕೇಳುತ್ತಿರುವ ಪ್ರಸಂಗಗಳನ್ನು ನಾವು ಕಾಣುತ್ತಿದ್ದೇವೆ. ನಮ್ಮ ವಿಶಾಲತೆ, ಉದಾರತೆ ಇವೆಲ್ಲವೂ ನಮಗೆ ಮುಳ್ಳಾಗಿ ಪರಿಣಮಿಸುತ್ತಿವೆ. ಹಾಗೆಂದು ನಾವು ಪ್ರತೀಕಾರವನ್ನೂ ತೆಗೆದುಕೊಳ್ಳುವಂತಿಲ್ಲ.

ನಮ್ಮ ನಡುವೆ ಇರುವ ಸ್ವಯಂಘೋಷಿತ ಬುದ್ಧಿಜೀವಿಗಳು ಸೆಕ್ಯುಲರ್ ಎಂಬ ಪದವನ್ನು ಪ್ರಯೋಗಿಸುತ್ತಾರೆ. ಆದರೆ ಈ ಪದದಷ್ಟು ನಮ್ಮನ್ನು ಮೋಸಗೊಳಿಸಿದ ಇನ್ನೊಂದು ಪದವಿಲ್ಲ. ಹಿಂದೂಗಳಿಗೆ ಸೆಕ್ಯೂಲರಿಸಂ ಕಲಿಸುವ ಅಗತ್ಯವಿಲ್ಲ. ನಮ್ಮ ರಕ್ತದ ಹನಿಹನಿಯಲ್ಲಿಯೂ ಸೆಕ್ಯುಲರಿಸಂ ಇದೆ. ಎಲ್ಲ ಧರ್ಮಗಳನ್ನು ಹೊತ್ತು ನಿಲ್ಲುವ ಮತ್ತು ಯೋಗ್ಯತೆ ನಮ್ಮ ಧರ್ಮಕ್ಕಿದೆ. ಸೆಕ್ಯುಲರಿಸಂ ಪಾಠ ಯಾರಿಗೆ ಬೇಕಾಗಿದೆಯೋ ಅವರಿಗೆ ಅದನ್ನು ಹೇಳುವುದಿಲ್ಲ. ಸ್ವಾಮಿ ವಿವೇಕಾನಂದರು ಚಿಕಾಗೋ ನಗರದಲ್ಲಿ ಸರ್ವಧರ್ಮ ಸಮಾವೇಶದಲ್ಲಿ ಭಾಗವಹಿಸುತ್ತಿದ್ದಾಗ ವೇದಿಕೆಯ ಪಕ್ಕದಲ್ಲಿ ಅನೇಕ ಧರ್ಮಗ್ರಂಥಗಳನ್ನು ಜೋಡಿಸಿಟ್ಟಿದ್ದರು. ಭಗವದ್ಗೀತೆಯನ್ನು ಅತ್ಯಂತ ಕೆಳಸ್ತರದಲ್ಲಿ ಇಟ್ಟಿದ್ದನ್ನು ನೋಡಿ ಕೆಲವು ಪಾದ್ರಿಗಳು "ವಿವೇಕಾನಂದರೇ ನಿಮ್ಮ ಗ್ರಂಥಕ್ಕೆ ಎಲ್ಲಿ ಸ್ಥಾನ ಸಿಗಬೇಕೋ ಅಲ್ಲಿ ಸಿಕ್ಕಿದೆ ನೋಡಿ" ಎಂದು ಚುಡಾಯಿಸಿದರು. ಅದಕ್ಕೆ ವಿವೇಕಾನಂದರು, "ಎಲ್ಲ ಧರ್ಮಗಳ ಗ್ರಂಥಗಳನ್ನು ಹೊತ್ತು ನಿಲ್ಲುವ ಒಂದು ಗ್ರಂಥವಿದ್ದರೆ ಅದು ನಮ್ಮ ಭಗವದ್ಗೀತೆ, ಆದುದರಿಂದ ಅದನ್ನು ಸರಿಯಾದ ಜಾಗದಲ್ಲಿಯೇ ಇರಿಸಿದ್ದಾರೆ" ಎಂದು ಉತ್ತರಿಸಿದರು.

ನಾವು ಇತರ ಧರ್ಮದವರನ್ನು ಒಪ್ಪಿಕೊಂಡಷ್ಟು ಸುಲಭವಾಗಿ ಇತರರು ನಮ್ಮನ್ನು ಒಪ್ಪಿಕೊಳ್ಳುವುದಿಲ್ಲ. ಕರ್ನಾಟಕದಲ್ಲಿ ಪ್ರತಿದಿನ ಎಷ್ಟೋ ಜನರು ಮತಾಂತರವಾಗುತ್ತಿದ್ದಾರೆ ಎಂಬ ವಿಚಾರ ಎಲ್ಲರಿಗೂ ತಿಳಿದಿರಲಾರದು. ಒಬ್ಬ ಶಾಸಕರೇ "ನನ್ನ ತಾಯಿ ಮತಾಂತರವಾಗಿದ್ದಾರೆ, ನಮ್ಮ ಮನೆಯಲ್ಲಿ ಸತ್ಯನಾರಾಯಣ ಪೂಜೆ ಮಾಡಿದರೆ ಆಕೆ ಪ್ರಸಾದ ಸ್ವೀಕರಿಸುವುದಿಲ್ಲ, ಮತಾಂತರವು ಒಂದೇ ಮನೆಯಲ್ಲಿ ತಾಯಿ ಮತ್ತು ಮಗನನ್ನು ಬೇರೆ ಬೇರೆ ಮಾಡಿದೆ" ಎಂದು ಶಾಸನಸಭೆಯಲ್ಲಿ ಹೇಳಿದ್ದರು. ನಮ್ಮ ಧರ್ಮದಲ್ಲಿ ಉಳಿದಿರುವ ಜನರನ್ನು ಉಳಿಸಿಕೊಳ್ಳಲಾರದ ದೌರ್ಬಲ್ಯ ಯಾವುದು ಎಂದು ನಾವು ಯೋಚಿಸದಿದ್ದರೆ ಅನಾಹುತ ನಿಶ್ಚಿತ. ಎಲ್ಲರೂ ಒಂದೇ ಎಂಬ ಭಾವನೆಯಿಂದ ಬದುಕಬೇಕಾಗಿರುವ ಸಂದರ್ಭದಲ್ಲಿ ನಮ್ಮ ಧರ್ಮದ ಅನುಯಾಯಿಗಳ ಸಂಖ್ಯೆ ಬೆಳೆಯಬೇಕು, ನಮ್ಮ ವೋಟುಗಳ ಸಂಖ್ಯೆ ವೃದ್ಧಿಯಾಗಬೇಕು ಎಂದು ಎಲ್ಲ ಧರ್ಮಗಳು ಹಪಹಪಿಸುತ್ತಿರುವಾಗ ನಾವೇ ಎಲ್ಲಿ ಅಲ್ಪಸಂಖ್ಯಾತರಾಗುತ್ತೇವೋ ಎಂಬ ಭಯದ ವಾತಾವರಣದಲ್ಲಿ ನಾವಿದ್ದೇವೆ.

ನಾವು ಇಲ್ಲಿ ಭಾಷಣ ಕೇಳಿಯೋ, ಕಾಶ್ಮೀರ ಫೈಲ್ಸ್ ಚಿತ್ರವನ್ನು ನೋಡಿಯೋ ಒಂದು ದಿನ ವೀರಾವೇಶಭರಿತರಾಗಿ ಮರುದಿನ ಎಲ್ಲವನ್ನೂ ಮರೆತು ಬಿಡಬಾರದು. ರಾಜಕಾರಣಿಗಳಿಗೆ ಮುಂದಿನ ಚುನಾವಣೆ ಮುಖ್ಯವಾಗುತ್ತದೆ. ಅವರಿಗೆ ವೋಟಿಗಾಗಿ ಯಾರು ಯಾರನ್ನೋ ಓಲೈಸುವ ಅನಿವಾರ್ಯತೆಯಿರುತ್ತದೆ. ಆದರೆ ಸಂತರೂ ಕೂಡ ರಾಜಕಾರಣಿಗಳಂತೆ ಯೋಚಿಸುವುದೇಕೆ? ನಮ್ಮ ಮಠಗಳು ಮೆಡಿಕಲ್ ಕಾಲೇಜು ಸ್ಥಾಪಿಸುತ್ತವೆ. ತಮ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತವೆ. ಆದರೆ ಧರ್ಮವನ್ನು ಗಟ್ಟಿಯಾಗಿ ಉಳಿಸಿಕೊಳ್ಳಲು ಅವರಿಗೆ ಏಕೆ ಸಾಧ್ಯವಾಗುತ್ತಿಲ್ಲ? ಇದನ್ನು ಎಲ್ಲರೂ ಯೋಚಿಸಬೇಕು. ಧಾರವಾಡದಲ್ಲಿ ಒಂದು ಕಲ್ಲಂಗಡಿ ಹಣ್ಣನ್ನು ರಸ್ತೆಗೆ ಎಸೆದು ಒಡೆದದ್ದು ದೊಡ್ಡ ಸುದ್ದಿಯಾಯಿತು. ಪರಿಸ್ಥಿತಿಯನ್ನು ಕೆಲವೇ ಗಂಟೆಗಳಲ್ಲಿ ನಿಯಂತ್ರಿಸದೆ ಇದ್ದಿದ್ದರೆ ಹುಬ್ಬಳ್ಳಿ ಅಂದೇ ಹೊತ್ತಿ ಉರಿಯುತ್ತಿತ್ತು. ಅದರ ಬಗ್ಗೆ ನಾವು ಚರ್ಚಿಸುವುದಿಲ್ಲ. ಸಾಮಾಜಿಕ ಜಾಲತಾಣದಲ್ಲಿ ಸಂದೇಶಗಳನ್ನು ಹಾಕಿದ ವ್ಯಕ್ತಿಯನ್ನು ಹುಡುಕಿ, ಜೈಲಿಗೆ ತಳ್ಳಿ, ಶಿಕ್ಷೆ ವಿಧಿಸಿದ ಮೇಲೂ ಇಡೀ ಊರಿಗೆ ಬೆಂಕಿ ಹಚ್ಚುವುದು ಯಾವ ರೀತಿಯ ಮನೋವೃತ್ತಿ? ಕೋಲಾರದ ಕ್ಲಾಕ್ ಟವರ್ ಎದುರಿನಲ್ಲಿ ಗಣಪತಿಯ ಮೆರವಣಿಗೆ ನಡೆಯದೆ ಎಪ್ಪತ್ತೈದು ವರ್ಷಗಳಾದವು. ಅದು ಸರಕಾರಿ ಆಸ್ತಿ, ಆದರೆ ಅದಕ್ಕೆ ಹಸಿರು ಬಣ್ಣ ಬಳಿದು ಅದರ ಮೇಲೆ ಹಸಿರು ಬಾವುಟ ಹಾರಿಸಲಾಗಿತ್ತು. ಸ್ಥಳವೊಂದು ಎರಡು ಸಮುದಾಯಗಳ ನಡುವೆ ಕಂದರ ನಿರ್ಮಿಸಿತ್ತು. ಒಬ್ಬ ಸಮರ್ಥ ಜಿಲ್ಲಾಧಿಕಾರಿ ಮತ್ತು ಪೊಲೀಸ್ ಅಧಿಕಾರಿ ಇಂತಹ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಬಗೆಹರಿಸುವುದು ಸಾಧ್ಯ. ಒಂದು ಸ್ಥಳವು ಸಮುದಾಯಗಳ ನಡುವೆ ಸಮಸ್ಯೆ ನಿರ್ಮಿಸುವುದಾದರೆ ಆ ಸ್ಥಳವನ್ನೇ ಸರಿಮಾಡುವುದು ಸಾಧ್ಯ ಎಂಬುದನ್ನು ಕೋಲಾರದ ಘಟನೆ ಸಾಬೀತು ಪಡಿಸಿತು. ಅಲ್ಲಿ ರಾತ್ರಿ ಬೆಳಗಾಗುವುದರಲ್ಲಿ ರಾಷ್ಟ್ರಧ್ವಜ ಹಾರಾಡಿತು. ಅಲ್ಲಿ ಯಾವುದೇ ಸಾವು-ನೋವು ಸಂಭವಿಸಲಿಲ್ಲ.



ರಾಜ್ಯಸಭೆಯಲ್ಲಿ 370ನೇ ವಿಧಿ ರದ್ದತಿಯ ವಿಧೇಯಕ ಅಂಗೀಕೃತವಾದಾಗ "ನಾನು ಬದುಕಿರುವಾಗಲೇ ಇದು ಸಾಧ್ಯವಾಯಿತಲ್ಲ" ಎಂದು ಭಾವುಕನಾಗಿದ್ದೆ. ಸರ್ವೋಚ್ಚ ನ್ಯಾಯಾಲಯವು ರಾಮಮಂದಿರದ ಪರವಾಗಿ ತೀರ್ಪನ್ನು ನೀಡಿದಾಗಲೂ ನಾನು ಅಷ್ಟೇ ಭಾವುಕನಾಗಿದ್ದೆ, ಏಕೆಂದರೆ, ಆ ಕಟ್ಟಡವು ಧರೆಗುರುಳಿದ ದಿನ ನಾನು ಕೇವಲ 100 ಮೀಟರ್ ದೂರದಲ್ಲಿ ಕುಳಿತಿದ್ದೆ.

ನಾನು ಕರ್ನಾಟಕದ ಶಾಸಕರ ನಿಯೋಗವೊಂದರ ಸದಸ್ಯನಾಗಿ ಜಮ್ಮು-ಕಾಶ್ಮೀರಕ್ಕೆ ಭೇಟಿ ನೀಡಿದ್ದಾಗ ಅಲ್ಲಿನ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ನಮ್ಮನ್ನೆಲ್ಲ ಉಪಾಹಾರಕ್ಕೆ ಆಮಂತ್ರಿಸಿದ್ದರು. ಆ ಸಮಯದಲ್ಲಿ ಅವರು "ನಮ್ಮ ಆದಾಯದ ಪ್ರಮುಖ ಮೂಲ ಪ್ರವಾಸೋದ್ಯಮ, ಪ್ರವಾಸಿಗಳು ಕಾಶ್ಮೀರಕ್ಕೆ ಆಗಮಿಸದಿದ್ದರೆ ನಮಗೆ ಯಾವ ಆದಾಯವೂ ಇರುವುದಿಲ್ಲ, ಆದರೆ ಇಲ್ಲಿನ ಕೆಲವು ಯುವಕರು ಪಾಕಿಸ್ತಾನದ ಜೊತೆ ಸೇರಿ ಮಾಡಬಾರದ್ದು ಮಾಡುತ್ತಿರುವುದರಿಂದ ಪ್ರವಾಸಿಗಳು ಇಲ್ಲಿಗೆ ಬರಲು ಹೆದರುತ್ತಿದ್ದಾರೆ" ಎಂದು ಹೇಳಿದ್ದರು. ಅವರ ಮನಸ್ಸಿನಲ್ಲಿಯೂ ಭಯೋತ್ಪಾದನೆ ನಿರ್ಮೂಲವಾಗಬೇಕೆಂಬ ಭಾವನೆ ಇದ್ದರೂ ಅದನ್ನು ಬಹಿರಂಗವಾಗಿ ವ್ಯಕ್ತಪಡಿಸಲು ಅವರಿಗೆ ಧೈರ್ಯವಿರಲಿಲ್ಲ. ನಮ್ಮ ದೇಶವನ್ನಾಳಿದ ಎಲ್ಲ ಪ್ರಧಾನಿಗಳ ಮನಸ್ಸಿನಲ್ಲಿಯೂ 370ನೆಯ ವಿಧಿಯನ್ನು ರದ್ದು ಮಾಡಬೇಕೆಂಬ ಹಂಬಲವಿತ್ತು. ಆದರೆ ಅದಕ್ಕೆ ಬೇಕಾದ ಎದೆಗಾರಿಕೆ ಅವರಿಗಿರಲಿಲ್ಲ. ನರೇಂದ್ರ ಮೋದಿ ಮತ್ತು ಅಮಿತ್ ಶಾ ಜೋಡಿ ಬಹಳ ಚಾಣಾಕ್ಷತೆಯಿಂದ 370ನೇ ವಿಧಿಯನ್ನು ರದ್ದು ಮಾಡಿತು. ಇದಕ್ಕೆ ಮೊದಲು 50000 ಹೆಚ್ಚುವರಿ ಸೈನಿಕರನ್ನು ಜಮ್ಮು-ಕಾಶ್ಮೀರದಲ್ಲಿ ನಿಯೋಜಿಸಲಾಗಿತ್ತು. ಇದು ಕ್ಷಾತ್ರತ್ವ. ಕಳೆದ ಆರೇಳು ವರ್ಷಗಳಿಂದ ಕ್ಷಾತ್ರತ್ವದ ಇಂತಹ ಅನೇಕ ನಿದರ್ಶನಗಳನ್ನು ನೋಡಬಹುದು.

ಇಂದು ದೇಶದ ಬಗ್ಗೆ ಯೋಚನೆ ಮಾಡುವ ಮನಸ್ಥಿತಿಯನ್ನು ಜನರಲ್ಲಿ ನಿರ್ಮಾಣ ಮಾಡುವ ಅವಶ್ಯಕತೆಯಿದೆ. ಕಾಲಿಗೆ ಮುಳ್ಳು ಚುಚ್ಚಿದರೆ ಇಡೀ ಶರೀರವು ಸ್ಪಂದಿಸುವಂತೆ ದೇಶದ ಯಾವುದೇ ಮೂಲೆಯಲ್ಲಿ ಅನಾಹುತ ಸಂಭವಿಸಿದರೆ ಅದಕ್ಕೆ ಎಲ್ಲರೂ ಸ್ಪಂದಿಸಬೇಕು. ಅನಂತಕುಮಾರರು ನಮ್ಮನ್ನೆಲ್ಲ ಒಮ್ಮೆ ಕಾಶ್ಮೀರಕ್ಕೆ ಕರೆದುಕೊಂಡು ಹೋಗಿದ್ದರು. ಆಗ ಅಲ್ಲಿ ನಮ್ಮ ದೇಶದ ಧ್ವಜ ಹಾರಾಡುತ್ತಿರಲಿಲ್ಲ. ಆದರೆ ಕಾಶ್ಮೀರದಲ್ಲಿ ರಾಷ್ಟ್ರಧ್ವಜ ಹಾರಾಡುವವರೆಗೆ ನಿಮಗೆ ನಾವು ಮತ ನೀಡುವುದಿಲ್ಲ ಎಂದು ಯಾರೂ ಹೇಳಲಿಲ್ಲ. ಏಕೆಂದರೆ, ಆ ಸಂಗತಿ ಅವರಿಗೆ ತಿಳಿದೇ ಇರಲಿಲ್ಲ.

(ಪುಟ 7 ರಲ್ಲಿ ಮುಂದುವರೆದಿದೆ)

# ತುಮಕೂರು ಜಿಲ್ಲೆಯ ಕೆಲವು ದೇವಾಲಯಗಳು -2

ದೇಗುಲದರ್ಶನ ಮಾಲಿಕೆ - 10

ಈ ತಿಂಗಳ ದೇಗುಲದರ್ಶನ ಕಾರ್ಯಕ್ರಮದಲ್ಲಿ ನಾವು ತುಮಕೂರು ಜಿಲ್ಲೆಯ ಇನ್ನಷ್ಟು ಪುರಾತನ ದೇವಾಲಯಗಳನ್ನು ಪರಿಚಯಮಾಡಿಕೊಳ್ಳೋಣ. ಅಲ್ಲದೆ, ತುಮಕೂರಿಗೆ ಹೋಗುವ ಮಾರ್ಗದಲ್ಲಿ ಸಿಗುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಿನ್ನಮಂಗಲ ಮತ್ತು ಹಳೇ ನಿಜಗಲ್ಲಿನ ಗುಡಿಗಳನ್ನೂ ನೋಡೋಣ.

ನೆಲಮಂಗಲಕ್ಕೆ ಹೊಂದಿಕೊಂಡಂತಿರುವ ಬಿನ್ನಮಂಗಲವು ಬೆಂಗಳೂರಿನಿಂದ 24 ಕಿಮೀ ದೂರದಲ್ಲಿದೆ. ಇಲ್ಲಿ 11 ನೆಯ ಶತಮಾನದಷ್ಟು ಹಳೆಯ ಮುಕ್ತೇಶ್ವರ ದೇವಾಲಯವಿದೆ. ಚೋಳರ ಕಾಲದ ಈ ಗುಡಿಯ ಜೀರ್ಣೋದ್ಧಾರ ಮಾಡಲಾಗಿದ್ದು ಗರ್ಭಗುಡಿಯ ಮುಕ್ತೇಶ್ವರ ಲಿಂಗಕ್ಕೆ ನಿತ್ಯ ಪೂಜೆ ಸಲ್ಲುತ್ತಿದೆ. ಹೊರಗೋಡೆಯ ಮೇಲಿರುವ ನಟರಾಜ, ವೆಂಕಟೇಶ, ಮಹಿಷಮರ್ದಿನಿ, ಕಾಲಭೈರವ ಮತ್ತಿತರ ಶಿಲ್ಪಗಳು ಆಕರ್ಷಕವಾಗಿವೆ.

ನೆಲಮಂಗಲದಿಂದ ತುಮಕೂರಿಗೆ ಹೋಗುವ ದಾರಿಯಲ್ಲಿರುವ ಹಳೇ ನಿಜಗಲ್ಲು ಬೆಟ್ಟದ ಮೇಲಿರುವ ವೀರಭದ್ರನ ದೇವಾಲಯ ಭಕ್ತಾದಿಗಳನ್ನು ಆಕರ್ಷಿಸುವ ಒಂದು ಪ್ರೇಕ್ಷಣೀಯ ಸ್ಥಳ. ದೊಡ್ಡ ಬಂಡೆಗಳಿಂದ ಕೂಡಿದ ಬೆಟ್ಟದ ಕಡೆಗೆ ಕೆಲವು ಸೋಪಾನಗಳನ್ನು ಏರಿ ಹೋಗುವಾಗಲೇ ವೀರಭದ್ರನ ಗುಡಿ ಕಾಣುತ್ತದೆ. ಇಲ್ಲಿ, ವಿವಿಧ ಆಯುಧಗಳನ್ನು ಹಿಡಿದು ನಿಂತ ವೀರಭದ್ರನ ಭವ್ಯವಾದ ಶಿಲ್ಪ 12 ಅಡಿ ಎತ್ತರವಿದೆ.

ತುಮಕೂರು ಜಿಲ್ಲೆಯ ಕೆಲವು ದೇವಾಲಯಗಳನ್ನು ಈಗಾಗಲೇ ಈ ಸರಣಿಯ ಮೊದಲ ಸಂಚಿಕೆಯಲ್ಲಿ ಪರಿಚಯಿಸಿದ್ದೇವೆ. ತುಮಕೂರು ತಾಲೂಕಿಗೆ ಸೇರಿದ ಕೈದಾಳವು ಗಂಗ, ಹೊಯ್ಸಳ ಮೊದಲಾದ ರಾಜವಂಶಗಳ ಕಾಲದಿಂದಲೂ ಪ್ರಸಿದ್ಧವಾದ ಸ್ಥಳ. ಇಲ್ಲಿನ ಕೇಶವ ಮತ್ತು ಗಂಗಾಧರೇಶ್ವರ ದೇವಾಲಯಗಳು ದರ್ಶನೀಯವಾದವು. ಕೇಶವನ ಭವ್ಯವಿಗ್ರಹ ಹೊಯ್ಸಳ ಶೈಲಿಯ ಶ್ರೇಷ್ಠ ಕಲಾಕೃತಿಗಳಲ್ಲೊಂದು.

ತುರುವೇಕೆರೆ ತಾಲೂಕಿನ ಸಂಪಿಗೆ ಗ್ರಾಮದಲ್ಲಿ ಶ್ರೀನಿವಾಸನ ದೇವಾಲಯವಿದೆ. ಇಲ್ಲಿರುವ ವೆಂಕಟೇಶನ ವಿಗ್ರಹವು ಮನಸೆಳೆಯುವಂತಿದ್ದು ನಿತ್ಯ ಪೂಜಾದಿಗಳಲ್ಲದೆ, ವಾರ್ಷಿಕ ಉತ್ಸವಗಳು ರಥೋತ್ಸವದೊಡನೆ ವೈಭವದಿಂದ ಜರುಗುತ್ತವೆ.

ಗುಬ್ಬಿಯಿಂದ ಐದು ಕಿಮೀ ದೂರದಲ್ಲಿರುವ ಮೂಕನಹಳ್ಳಿ ಪಟ್ಟಣವು ದೇವಾಲಯಗಳ ಬೀಡು. ಇಲ್ಲಿ ಲಕ್ಷ್ಮೀನರಸಿಂಹ, ರಾಮೇಶ್ವರ, ಕಲ್ಲೇಶ್ವರ, ಮಣ್ಣೆಮ್ಮ ಮೊದಲಾದ ದೇವಾಲಯಗಳನ್ನು ನೋಡಬಹುದು.

ಗುಬ್ಬಿ ತಾಲೂಕಿಗೆ ಸೇರಿದ ಕಡಬ ಎಂಬ ಊರಿನಲ್ಲಿ ಹಲವು ದೇವಾಲಯಗಳಿವೆ. ಇಲ್ಲಿನ ಶ್ರೀ ರಾಮ ಲಕ್ಷ್ಮೀಜನಾರ್ದನ ದೇವಾಲಯವು ಹನ್ನೆರಡನೆಯ ಶತಮಾನದಷ್ಟು ಹಳೆಯದು. ಸೀತಾ ಲಕ್ಷ್ಮಣ ಸಹಿತ ಶ್ರೀರಾಮನ ವಿಗ್ರಹವು ಈಚಿನದಾಗಿದ್ದರೆ, ವೇಣುಗೋಪಾಲ, ಜನಾರ್ದನ, ಯೋಗಾನರಸಿಂಹ, ಲಕ್ಷ್ಮೀದೇವಿಯರ ಮೂರ್ತಿಗಳು ಹೊಯ್ಸಳರ ಕಾಲದವು.

ಕಡಬದಲ್ಲಿರುವ ಕೈಲಾಸೇಶ್ವರ ದೇವಾಲಯ ಇನ್ನೊಂದು ಪುರಾತನ ದೇಗುಲ. ಇದು ಚೋಳರ ಕಾಲದ ದೇವಾಲಯ. ಇಲ್ಲಿರುವ ಸುಂದರ ವಿಗ್ರಹಗಳಲ್ಲಿ ಗಣಪತಿ, ಮಹಿಷಮರ್ದಿನಿ, ಕಾಲಭೈರವ ಮೊದಲಾದವು ಸೇರಿವೆ. ಪಾರ್ವತಿಯ ವಿಗ್ರಹದಲ್ಲಿ ಲಕ್ಷ್ಮೀ, ಸರಸ್ವತಿ, ಪಾರ್ವತಿ-ಈ ಮೂವರ ಸ್ವರೂಪಗಳೂ ಅಡಕವಾಗಿವೆಯೆಂದು ಹೇಳಲಾಗುತ್ತದೆ.

ಇದೇ ತಾಲೂಕಿಗೆ ಸೇರಿದ ಪುರ ಎಂಬ ಗ್ರಾಮದಲ್ಲಿ ಕಲ್ಲೇಶ್ವರ ದೇವಾಲಯವನ್ನು ನೋಡಬಹುದು. ದೇವಾಲಯದ ನವರಂಗದ ಮಂಟಪದಲ್ಲಿ ಇರಿಸಲಾದ ಗಣಪತಿ, ಕಾಲಭೈರವ ಮೊದಲಾದ ಮೂರ್ತಿಗಳು ವಿಶೇಷವಾಗಿವೆ. ಇದು ಹೊಯ್ಸಳ ಕಾಲದ ದೇವಾಲಯ.

ತಾಲೂಕು ಕೇಂದ್ರವಾದ ಗುಬ್ಬಿಯಲ್ಲಿ ಶ್ರೀ ಮಲ್ಲಿಕಾರ್ಜುನ ದೇವಾಲಯದಲ್ಲಿರುವ ಹಲವು ಶಿಲ್ಪಗಳು ಗಂಗರ ಶೈಲಿಯವು. ಗಣಪತಿ, ಕಾಲಭೈರವ, ದಕ್ಷಿಣಾಮೂರ್ತಿ ಷಣ್ಮುಖ ಮೊದಲಾದ ಶಿಲ್ಪಗಳು ವಿಶೇಷವಾಗಿವೆ. ಗುಬ್ಬಿಯಲ್ಲಿರುವ ಆದಿನಾಥನ ಬಸದಿಯಲ್ಲಿ ಇರಿಸಲಾಗಿರುವ ಅಮೃತಶಿಲೆಯ ಬಾಹುಬಲಿಯ ಮೂರ್ತಿಯೂ ದರ್ಶನೀಯವಾಗಿದೆ. ★

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**















ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ನೋಡಲು ಬೇಕಾದ ಲಿಂಕ್ ಇಲ್ಲಿದೆ:
http://YouTube.com/AnanthkumarPratishthana

ಪುಟ 3 ರಿಂದ

# ‘ಕಾರ್ಮಿಕ ಬಂಧು ಅನಂತಕುಮಾರ್’

ವಿಜಯಾ ಬ್ಯಾಂಕ್ ತನ್ನ 1000 ನೇ ಶಾಖೆಯನ್ನು ಉದ್ಘಾಟಿಸಲು ಚಿದಂಬರಂ ಅವರನ್ನು ಕರೆಯಿಸಿ ಬೆಂಗಳೂರಿನ ತುಂಬ ಅವರ ಕಟೌಟ್ ನಿಲ್ಲಿಸಿತ್ತು. ಅದಾದ ಕೆಲವೇ ವರ್ಷಗಳ ನಂತರ ಅನಂತಕುಮಾರರು ಆರ್ಥಿಕ ಆಯೋಗದ ಅಧ್ಯಕ್ಷರಾಗಿ ಬೆಂಗಳೂರಿಗೆ ಆಗಮಿಸಿದಾಗ ಅವರು ಬರುವ ದಾರಿಯುದ್ದಕ್ಕೂ ಸ್ವಾಗತ ಕಮಾನುಗಳನ್ನು ಬ್ಯಾಂಕಿನ ವತಿಯಿಂದಲೇ ನಿಲ್ಲಿಸಿದ್ದೆವು. ಅಂದು ನಮ್ಮ ನಾಯಕರಿಗೆ ದೊರೆತ ಅಭೂತಪೂರ್ವ ಸ್ವಾಗತದಿಂದ ನಮ್ಮ ಎದೆ ತುಂಬಿ ಬಂದಿತ್ತು.

2011ರಿಂದ 2018ರ ವರೆಗೂ ಅವರು ನಮ್ಮ ಸಂಘದ ಕಾರ್ಯಾಧ್ಯಕ್ಷರಾಗಿ ನಮಗೆ ಮಾರ್ಗದರ್ಶನ ನೀಡಿದರು. ನಮ್ಮ ತ್ರೈವಾರ್ಷಿಕ ಸಮ್ಮೇಳನದಲ್ಲಿ ಅನೇಕ ಹಿರಿಯ ನಾಯಕರು ಭಾಗವಹಿಸುವಂತೆ ಮಾಡಿ ನಮ್ಮ ಘನತೆಯನ್ನು ಹೆಚ್ಚಿಸಿದರು. ಕೇಂದ್ರ ಮಂತ್ರಿಗಳಾಗಿದ್ದ ಶತ್ರುಘ್ನ ಸಿನ್ಹಾ, ಅರುಣ್ ಶೌರಿ, ಮನೋಹರ ಜೋಷಿ, ಅದ್ವಾನಿ, ರವಿಶಂಕರ ಪ್ರಸಾದ್ ಮುಂತಾದ ಘಟಾನುಘಟಿ ನಾಯಕರು ನಮ್ಮ ಸಮ್ಮೇಳನಗಳಲ್ಲಿ ಭಾಗವಹಿಸಲು ಅನಂತಕುಮಾರರ ಪ್ರಭಾವವೇ ಕಾರಣ.

ನಮ್ಮ ರಾಷ್ಟ್ರೀಯ ಸಂಘಟನೆಯಾದ ನ್ಯಾಷನಲ್ ಆರ್ಗನೈಸೇಷನ್ ಆಫ್ ಬ್ಯಾಂಕ್ ವರ್ಕರ್ಸ್ ಸಂಸ್ಥೆಗೆ ದ್ವಿಪಕ್ಷೀಯ ಒಪ್ಪಂದಗಳಿಗೆ ಸಹಿ ಹಾಕುವ ಅವಕಾಶವನ್ನು ಬಹುಕಾಲ ನಿರಾಕರಿಸಲಾಗಿತ್ತು. ಅನಂತಕುಮಾರರ ಪರಿಶ್ರಮದಿಂದ ಹದಿನಾಲ್ಕು ವರ್ಷಗಳ ನಂತರ ಎಂಟನೆಯ ದ್ವಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕುವುದು ಸಾಧ್ಯವಾಯಿತು. ಆ ಸಂದರ್ಭದಲ್ಲಿ ಭಾರತೀಯ ಬ್ಯಾಂಕರುಗಳ ಸಂಘವು ವೇತನ ಪರಿಷ್ಕರಣದ ಬಗ್ಗೆ ಕಠಿಣ ನಿಲುವನ್ನು ತಳೆದಿತ್ತು. ಅನಂತಕುಮಾರರು ಸರಕಾರದಿಂದ ಬ್ಯಾಂಕರುಗಳ ಸಂಘಕ್ಕೆ ಸೂಕ್ತ ನಿರ್ದೇಶನ ಕೊಡಿಸಿ ಒಪ್ಪಂದವು ಸುಗಮವಾಗಿ ಅಂತಿಮಗೊಳ್ಳಲು ನೆರವಾಗಿದ್ದರು.

17/12/2017 ರಂದು ನಮ್ಮ ಸಂಘದ ಸುವರ್ಣ ಮಹೋತ್ಸವ ನಡೆಯಿತು. ಬ್ಯಾಂಕಿನಲ್ಲಿ ಅಂದು ನೂರಾರು ಜನ ತಾತ್ಕಾಲಿಕ ಉದ್ಯೋಗಿಗಳು ಕೆಲಸ ಮಾಡುತ್ತಿದ್ದರು. ಅವರಿಗೆ ಯಾವ ಸೇವಾ ನಿಯಮಗಳಿರಲಿಲ್ಲ. ಅವರ ಶೋಷಣೆಯ ಅರಿವಿದ್ದ ಅನಂತಕುಮಾರರು ಸುವರ್ಣಮಹೋತ್ಸವ ಸಮಾರಂಭದ ವೇದಿಕೆಯಲ್ಲಿಯೇ ಬ್ಯಾಂಕಿನ ಅಧ್ಯಕ್ಷರನ್ನು ತರಾಟೆಗೆ ತೆಗೆದುಕೊಂಡರು. ಅವರು ಅಂದು ನಡೆಸಿದ ಸಂಧಾನವು ಫಲಪ್ರದವಾಗಿ ಜನವರಿ 2019ರಲ್ಲಿ ಒಂದು ಒಪ್ಪಂದಕ್ಕೆ ಸಹಿ ಹಾಕಿದೆವು. ಆದರೆ ಆ ಒಪ್ಪಂದವು ಕಾರಣಾಂತರಗಳಿಂದ ಇಂದಿಗೂ ಜಾರಿಯಾಗದಿರುವುದು ದುರದೃಷ್ಟಕರ. ಅದೇ ಸಮಾರಂಭದಲ್ಲಿ ದೂರದ ಡೆಹರಾಡೂನಿನಿಂದ ಮಹಿಳಾ ಸದಸ್ಯೆಯೊಬ್ಬಳು ಉತ್ಸಾಹದಿಂದ ಭಾಗವಹಿಸಿದ್ದ ಸುದ್ದಿ ಕೇಳಿ ಆಕೆಯನ್ನು ವೇದಿಕೆಗೆ ಕರೆದು ಅವಳಿಂದಲೇ ದೀಪ ಬೆಳಗಿಸಿದ್ದರು. ಅವರು ದೇಶದ ಯಾವುದೇ ಭಾಗಕ್ಕೆ ಪ್ರವಾಸ ಮಾಡಿದಾಗಲೂ ನಮ್ಮ ಸದಸ್ಯರನ್ನು ಕರೆದು ಮಾತನಾಡಿಸದಿರುತ್ತಿರಲಿಲ್ಲ. ಮೃತ ಉದ್ಯೋಗಿಗಳ ವಿಧವೆಯರು ನೇರವಾಗಿ ಅವರನ್ನು ಭೇಟಿಯಾಗಿ ತಮ್ಮ ದುಃಖವನ್ನು ನಿವೇದಿಸಿಕೊಳ್ಳುತ್ತಿದ್ದರು. ಅನಂತಕುಮಾರರೂ ತಾಳ್ಮೆಯಿಂದ ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದರು.

ಅವರು ನಮ್ಮ ಸಂಘದ ಹಿತೈಷಿಯಾಗಿದ್ದರೂ, ಕಾರ್ಯಾಧ್ಯಕ್ಷರಾಗಿದ್ದರೂ ಬ್ಯಾಂಕಿನ ಸಮಸ್ಯೆಗಳಿಗೂ ಸಕಾರಾತ್ಮಕವಾಗಿ ಸ್ಪಂದಿಸುತ್ತಿದ್ದರು. ಹೀಗೆ ಒಮ್ಮೆ ಮಾತುಕತೆಯಲ್ಲಿ ನಿರತರಾಗಿದ್ದಾಗ ಬ್ಯಾಂಕಿಗೆ ತುರ್ತಾಗಿ ಅಗತ್ಯವಿದ್ದ 2000 ಕೋಟಿ ರೂಪಾಯಿಗಳ ಪ್ರಸ್ತಾಪವನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿರುವುದಾಗಿಯೂ, ಕೇಂದ್ರದಿಂದ ಈ ಬಗ್ಗೆ ಯಾವ ಪ್ರತಿಕ್ರಿಯೆಯೂ ದೊರೆತಿಲ್ಲ ಎಂದೂ ಬ್ಯಾಂಕಿನ ಅಧ್ಯಕ್ಷರು ತಿಳಿಸಿದರು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ಅನಂತಕುಮಾರರು ಕೇವಲ 48 ಗಂಟೆಗಳಲ್ಲಿ ಆ 2000 ಕೋಟಿ ರೂಪಾಯಿಗಳ ಬಂಡವಾಳವನ್ನು ಮಂಜೂರು ಮಾಡಿಸಿದರು.

ಅನಂತಕುಮಾರರ ಎಲ್ಲ ಕೆಲಸಗಳಲ್ಲಿಯೂ ನಮ್ಮ ಸದಸ್ಯರು ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಅವರ ಸತ್ಯಾಗ್ರಹಗಳಲ್ಲಿ ನಾವು ಯಾವಾಗಲೂ ಹಾಜರಿರುತ್ತಿದ್ದೆವು. ಅವರ ಮನೆಯಲ್ಲಿ ನಡೆಯುವ ಜನ್ಮದಿನ ಮುಂತಾದ ವಿಶೇಷ ಸಂದರ್ಭಗಳಿಗೆ ನಮಗೆಯಾವಾಗಲೂ ಆಹ್ವಾನವಿರುತ್ತಿತ್ತು. ಅವರು ಎದುರಿಸಿದ ಎಲ್ಲ ಚುನಾವಣೆಗಳಲ್ಲಿ ನಾವು ಪ್ರಚಾರ ಮಾಡಿದ್ದೇವೆ. ಒಂದು ಸಂದರ್ಭದಲ್ಲಿ ಅವರ ಚುನಾವಣಾ ವೆಚ್ಚಕ್ಕೆ ನಮ್ಮ ಸಂಘದಿಂದ ದೇಣಿಗೆ ನೀಡುವ ಪ್ರಸ್ತಾಪ ಮಾಡಿದಾಗ “ಚುನಾವಣೆಗಾಗಿ ನಮಗೆ ಧನಸಹಾಯದ ಅಗತ್ಯವಿಲ್ಲ” ಎಂದು ನಿರಾಕರಿಸಿದ್ದರು.

ಅನಂತಕುಮಾರರು ನಮ್ಮ ಸಂಘಟನೆಯ ಹಿಂದಿನ ಶಕ್ತಿಯಾಗಿದ್ದರು. ಅವರು ನಮ್ಮ ಬೆನ್ನಿಗಿದ್ದಾರೆ ಎಂಬ ಅರಿವು ನಮ್ಮಲ್ಲಿ ಅಗಾಧವಾದ ಆತ್ಮ ವಿಶ್ವಾಸವನ್ನು ಹುಟ್ಟಿಸಿತ್ತು. ಅಂತಹ ನಾಯಕನನ್ನು ಕಳೆದುಕೊಂಡ ನಾವು ಅನಾಥಪ್ರಜ್ಞೆಯನ್ನು ಅನುಭವಿಸುತ್ತಿದ್ದೇವೆ. ಆಳಾಗುವಷ್ಟೇ ಸಹಜವಾಗಿ ಅರಸಾಗಬಲ್ಲ ಅನಂತಕುಮಾರರ ಸಹವಾಸದ ಅವಕಾಶ ಪಡೆದ ನಾವು ಧನ್ಯರು. ಅವರು ಎಲ್ಲಿದ್ದರೂ ಅಲ್ಲಿಂದಲೇ ನಮ್ಮನ್ನು ಆಶೀರ್ವದಿಸುತ್ತಾರೆ ಎಂಬ ನಂಬಿಕೆ ನಮ್ಮದು.

“ಅನಂತಕುಮಾರರೇ, ನಿಮ್ಮ ನಾಮದ ಬಲದಿಂದಲೇ ನಾವು ಬೆಳೆದೆವು; ನೀವು ಹಿಂದೆ ಇದ್ದೀರಿ ಎಂಬ ವಿಶ್ವಾಸವೇ ನಮಗೆ ಆನೆಯ ಬಲ ತಂದಿತ್ತು” ಎಂಬುದು ಶ್ರೀ ಪೂಂಜಾರವರ ಕೃತಜ್ಞತೆಯ ಮಾತು.

ಪುಟ 4 ರಿಂದ

# ‘ದೇಶ ರಕ್ಷಣೆಯಲ್ಲಿ ಕ್ಷಾತ್ರ ಅನಿವಾರ್ಯ’

ಇಂದು ಕೇರಳ ಮತ್ತು ಪಶ್ಚಿಮ ಬಂಗಾಳಗಳಲ್ಲಿಯೂ ಪರಿಸ್ಥಿತಿ ಕ್ರೈಮೀರಿದೆ. ಹೀಗಿರುವಾಗ ಆಡಳಿತದಲ್ಲಿ ಕ್ಷಾತ್ರವಿರಲಿ ಎಂದು ನಾವು ಕರ್ನಾಟಕ ಸರಕಾರಕ್ಕೆ ಆಗ್ರಹ ಮಾಡಬೇಕು. ಕಾಶ್ಮೀರದಲ್ಲಿ ಹಿಂದೂಗಳು ತಮ್ಮ ದುಡಿಮೆಯಿಂದ ಸಮೃದ್ಧಿಯನ್ನು ಉಂಟು ಮಾಡುತ್ತಿರುವಾಗಲೇ ಮುಸ್ಲಿಮರು ಅವರ ಮನೆಮಠಗಳನ್ನು ಗುರುತಿಸಿ ಇವೆಲ್ಲವೂ ತಮ್ಮವು, ಹಿಂದೂಗಳ ಹೆಣ್ಣು ಮಕ್ಕಳು ತಮ್ಮ ಸ್ವತ್ತು ಎಂದು ಗುರುತಿಸಿಕೊಂಡಿದ್ದರು. ಮುಸ್ಲಿಮರ ಭಯೋತ್ಪಾದನೆಗೆ ಬಲಿಯಾದ ಎಲ್ಲ ಹಿಂದೂಗಳೂ ಕಣಿವೆಯಿಂದ ಪಲಾಯನ ಮಾಡಬೇಕಾಯಿತು. ಅವರು ನಂಬಿದ ಧರ್ಮದ ಮೂಲತತ್ತ್ವಗಳೇ ಹೀಗಿರುವುದನ್ನು ಗಮನಿಸಿ ನಮ್ಮನ್ನು ಆಳುವವರು ಆಡಳಿತದಲ್ಲಿ ಕ್ಷಾತ್ರವನ್ನು ರೂಢಿಸಿಕೊಳ್ಳಬೇಕು, ಹಿಂದೂಗಳಿಗೆ ಸುರಕ್ಷತೆಯ ವಾತಾವರಣ ನಿರ್ಮಾಣವಾಗಬೇಕು, ಕಾಶ್ಮೀರದಲ್ಲಿ ನಡೆದ ಘಟನೆ ದೇಶದ ಯಾವುದೇ ಭಾಗದಲ್ಲಿ ಮರುಕಳಿಸದಿರಲಿ ಎಂಬುದೇ ನಮ್ಮೆಲ್ಲರ ಆಶಯ.

(ಅನಂತಕುಮಾರ್ ಪ್ರತಿಷ್ಠಾನವು ಏರ್ಪಡಿಸಿದ್ದ ದೇಶ ಮೊದಲು ಕಾರ್ಯಕ್ರಮಸರಣಿಯ “ನಮ್ಮ ಕಾಶ್ಮೀರ ನಮ್ಮ ಹೊಣೆ” ಸಂವಾದದಲ್ಲಿ ಮಾಡಿದ ಭಾಷಣದ ಸಂಗ್ರಹ)

ಪುಟ 5 ರಿಂದ

# ‘ಹಿಂದೂ ಸಂಸ್ಕೃತಿಯ ಉಳಿವು ಅತ್ಯಗತ್ಯ’

ನಮ್ಮ ದೇಶದ ಏಕತೆಯ ದೃಷ್ಟಿಯಿಂದ ಹಾಗೂ ಪ್ರತಿಯೊಬ್ಬ ನಾಗರಿಕನ ಹೃದಯದಲ್ಲಿ ದೇಶಭಕ್ತಿ ಜಾಗೃತವಾಗಲು ನಮ್ಮ ಕಾಶ್ಮೀರ – ನಮ್ಮ ಹೊಣೆಯಂತಹ ಕಾರ್ಯಕ್ರಮಗಳು ನಡೆಯಬೇಕು. ಇಂತಹ ಕಾರ್ಯಕ್ರಮಗಳ ಮೂಲಕ ಸಮಗ್ರ ಭಾರತದ ಅರಿವು ಮೂಡುತ್ತದೆ. ದೇಶವು ಆಡಳಿತಾತ್ಮಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ಒಂದಾಗಬೇಕು. 1947 ರಲ್ಲಿ 524 ಪ್ರಾಂತ್ಯಗಳು ಒಂದಾಗಿ ಸಮಗ್ರಭಾರತದ ಉದಯವಾಗಲು ಈ ದೇಶವನ್ನು ಆಳುತ್ತಿದ್ದ ಹಿಂದೂ ಸಂಸ್ಕೃತಿಯೇ ಕಾರಣ. ಆದುದರಿಂದ ಈ ಸಂಸ್ಕೃತಿಗೆ ಯಾವುದೇ ಧಕ್ಕೆಯಾಗದಂತೆ ಉಳಿಸಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ.

# ಮಾವಿನ ಮರ

**ಸಸ್ಯಲೋಕ ಪರಿಚಯ ಮಾಲಿಕೆ- 7**



ಮಾವಿನ ಹಣ್ಣಿನ ಸಸ್ಯಶಾಸ್ತ್ರೀಯ ಹೆಸರು - ಮ್ಯಾಂಗಿಫೆರಾ ಇಂಡಿಕಾ'. ಭಾರತದ ರಾಷ್ಟ್ರೀಯ ಹಣ್ಣಾದ ಮಾವಿನ ಹಣ್ಣು ಹಣ್ಣುಗಳ ರಾಜ ಎಂದೇ ಪರಿಗಣಿಸಲ್ಪಟ್ಟಿದೆ. ಮಾವಿನಮರ ಕಲ್ಪವೃಕ್ಷವೇ ಸರಿ. ಈ ಮರವನ್ನು ಪ್ರಾಣಿ, ಪಕ್ಷಿ, ಮಾನವರಿಗೆ ದೇವರು ಕೊಟ್ಟ ವರವೆಂದೇ ಹೇಳಬಹುದು. ಹಣ್ಣುಗಳ ರಾಜನೆಂದೇ ಕರೆಯಲ್ಪಡುವ ಮಾವಿನ ಹಣ್ಣಿನ ರುಚಿಗೆ ಸೋಲದವರಿಲ್ಲ. ಆರೋಗ್ಯಕ್ಕೂ ಇದರ ಕೊಡುಗೆ ಅಪಾರ.



ಮಾವಿನಮರ ಉಷ್ಣವಲಯದಲ್ಲಿ ಪ್ರಪಂಚದೆಲ್ಲೆಡೆ ವ್ಯಾಪಕವಾಗಿ ಕಂಡು ಬರುವ ಮರ. ಇದರ ಹಣ್ಣೇ ಜಗತ್ಪ್ರಸಿದ್ಧ. ಜಗತ್ತಿನಾದ್ಯಂತ ಮಾವಿನ ನೂರಾರು ತಳಿಗಳು ಕಾಣಬರುತ್ತದೆ. ಇದು ಸುಮಾರು 6000 ವರ್ಷಗಳಿಂದಲೂ ಭಾರತದ ಬೇಸಾಯದಲ್ಲಿದ್ದು, ಸುಮಾರು 15 ಮತ್ತು 16 ನೇ ಶತಮಾನದಲ್ಲಿ ಯುರೋಪಿನ ಪ್ರವಾಸಿಗರು ಇದನ್ನು ಪಶ್ಚಿಮದ ಉಷ್ಣವಲಯ ದೇಶಗಳಲ್ಲಿ ಪಸರಿಸಿದರು. ಆಮ್ರಫಲ, ಮಾವಿನ ಮರ, ಮಾಮರ, ಮಾಮಿಡಿ ಚೆಟ್ಟು, ಆಮ್ಕಾಯಿ, ಮಾಂಗ್ಯೆ, ಆಮ್, ಆಮ್ರವನ್, ಆಮ್ರ ವೃಕ್ಷ್ ಎಂಬೆಲ್ಲ ಹೆಸರುಗಳಿಂದ ಕರೆಯಲ್ಪಡುವ ಇದೊಂದು ಮಹಾವೃಕ್ಷ.

ಮಾವಿಗೆ ಭಾರತದಲ್ಲಿ ಸಾವಿರಾರು ವರ್ಷಗಳ ಪ್ರಾಚೀನ ಇತಿಹಾಸವಿದೆ. ಮಾವಿನ ವೃಕ್ಷದ ಬಗ್ಗೆ ವೇದಗಳಲ್ಲಿ, ರಾಮಾಯಣ - ಮಹಾಭಾರತ ಗ್ರಂಥಗಳಲ್ಲಿ ಉಲ್ಲೇಖಗಳಿವೆ. ಜೈನ ಬೌದ್ಧ ಗ್ರಂಥಗಳಲ್ಲಿಯೂ ಇದರ ಉಲ್ಲೇಖವಿದೆ. ಇದರ ಮೂಲ ಭಾರತ - ಜಂಬೂ ದ್ವೀಪ ಎಂದು ಪುರಾಣಗಳಲ್ಲಿ ಉಲ್ಲೇಖವಾಗಿದೆ. ಈಗಲೂ ಬಿಹಾರ್, ಜಾರ್ಖಂಡ್ ರಾಜ್ಯಗಳಲ್ಲಿ ಮಾವಿನ ಮರವನ್ನು ದೇವಿಯ ಸ್ವರೂಪವೆಂದೇ ತಿಳಿದು "ಆಮರಿದೇವಿ" ಎಂದು ಆರಾಧಿಸುತ್ತಾರೆ.

ಪುರಾತನ ಕಾಲದಲ್ಲಿ ಋಷಿಮುನಿಗಳು ಇದರ ಹೆಚ್ಚುಗಾರಿಕೆ ತಿಳಿದುಕೊಂಡು ಹಬ್ಬಗಳಿಗೆ, ಶುಭಕಾರ್ಯಗಳಿಗೆ, ಮನೆಗೆ ಮಾವಿನ ಎಲೆಗಳ ತೋರಣಗಳನ್ನು ಕಟ್ಟುವ ಸಂಪ್ರದಾಯ ಪ್ರಾರಂಭಿಸಿದರು. ಈಗಲೂ ನಾವು ಹಬ್ಬ ಹರಿದಿನಗಳಲ್ಲಿ ಶುಭಕಾರ್ಯಗಳಲ್ಲಿ, ಮನೆಯ ಬಾಗಿಲಿಗೆ, ದೇವಾಲಯಗಳಲ್ಲಿ ಮಾವಿನ ಎಲೆಗಳ ತೋರಣ ಕಟ್ಟುತ್ತೇವೆ.



ಛಾಯಾ ಓಕ್ ಬಾಪಟ್

ಮಾವಿನ ಓಟೆಯನ್ನು ಮಣ್ಣಲ್ಲಿ ನೆಟ್ಟು ಸಸಿ ತಯಾರು ಮಾಡಿ ನೆಡಬಹುದು. ಅಥವಾ ಸಸಿಗೆ ಕಸಿ ಮಾಡಿ ಒಳ್ಳೆಯ ಹಣ್ಣನ್ನು ಪಡೆಯಬಹುದು. ಜನವರಿಯಿಂದ ಹೂಬಿಡಲು ಪ್ರಾರಂಭಿಸಿ ಏಪ್ರಿಲ್ - ಮೇ ತಿಂಗಳಿಗೆ ಮಾವಿನ ಹಣ್ಣುಗಳು ದೊರಕುತ್ತವೆ. ಮಾವು ಬೆಳೆಯುವುದರಲ್ಲಿ ಭಾರತ ದೇಶ ಪ್ರಪಂಚದಲ್ಲೇ ಪ್ರಥಮ ಸ್ಥಾನದಲ್ಲಿದ್ದು, ಅದರಲ್ಲೂ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ. ಕೋಲಾರ ಜಿಲ್ಲೆ ಮಾವಿಗೆ ತವರೂರು.

ಮಾವಿನ ಹಣ್ಣು ಅತ್ಯಂತ ರುಚಿಕರವಾಗಿದ್ದು, ಪ್ರಪಂಚದಾದ್ಯಂತ ಬೇಡಿಕೆಯಲ್ಲಿದೆ. ಮಾವಿನ ಹಣ್ಣಿನ ಅನೇಕ ತಳಿಗಳಿದ್ದು ಪ್ರತಿ ವರ್ಷವೂ ಹೊಸತಾದ ತಳಿಗಳನ್ನು ಸೃಷ್ಟಿಸುತ್ತಲೇ ಇದ್ದಾರೆ. ಇದರಲ್ಲಿ ಹೆಚ್ಚಿನವುಗಳು ತಿನ್ನಲು ಯೋಗ್ಯವಾದವುಗಳಾಗಿದ್ದು, ಕೆಲವು ಪಾನೀಯ ತಯಾರಿಕೆಗೆ ಉಪಯುಕ್ತ. ಕಾಡು ಮಾವಿನ ಜಾತಿಗಳಲ್ಲಿ ಅಪ್ಪೆಮಿಡಿ ಮತ್ತು ಕೆಲವು ಜಾತಿಯ ಮಾವಿನಕಾಯಿ ಉಪ್ಪಿನಕಾಯಿ ತಯಾರಿಕೆಗೆ ಬಳಸಲ್ಪಡುತ್ತವೆ.

ರಸಪುರಿ, ಅಲ್ಫಾನ್ಸೋ, ರತ್ನಾಗಿರಿ, ಮಲ್ಗೋಬಾ, ನೀಲಂ, ಕೇಸರ್ ಬಾದಾಮಿ, ಮಲ್ಲಿಕಾ, ತೋತಾಪುರಿ, ಬೈಗನಪಲ್ಲಿ, ರಾಜಗಿರಿ, ಮುಂತಾಗಿ ನಮ್ಮಲ್ಲಿನ ಮಾವಿನ ತಳಿಗಳ ಹೆಸರುಗಳು ಬಹಳ ರೋಚಕವಾಗಿವೆ.

ಮಾವಿನ ಹಣ್ಣಿನ ಸೇವನೆ ದೇಹದ ಆರೋಗ್ಯವನ್ನೂ ಸಹ ಕಾಪಾಡುತ್ತದೆ. ಮಾವಿನ ಹಣ್ಣುಗಳಲ್ಲಿ ವಿಟಮಿನ್ ಸಿ ಅಂಶ ಮತ್ತು ವಿಟಮಿನ್ ಎ ಅಂಶ ಹೆಚ್ಚಾಗಿ ಕಂಡುಬರುವುದರಿಂದ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ಅತ್ಯುತ್ತಮವಾಗಿ ನಿರ್ವಹಣೆ ಮಾಡುವ ಗುಣವನ್ನು ಇದು ಪಡೆದಿದೆ. ಕಣ್ಣಿನ ಆರೋಗ್ಯಕ್ಕೆ ಒಳ್ಳೆಯದು. ಮಾವಿನ ಹಣ್ಣುಗಳು ಪೊಟಾಸಿಯಂ ಅಂಶದಲ್ಲಿ ಮತ್ತು ಆಂಟಿ ಆಕ್ಸಿಡೆಂಟ್ ಅಂಶಗಳಲ್ಲಿ ಮುಂಚೂಣಿಯಲ್ಲಿವೆ. ಇದರಿಂದ ರಕ್ತದ ಒತ್ತಡ ನಿರ್ವಹಣೆಯಾಗುತ್ತದೆ. ಮಾವಿನಹಣ್ಣಿನ ಸೇವನೆಯಿಂದ ರಕ್ತದಲ್ಲಿ ಹಿಮೋಗ್ಲೋಬಿನ್ ಅಂಶ ವೃದ್ಧಿಸುತ್ತದೆ.

ಮಾವಿನಹಣ್ಣನ್ನು ಹಿತವಾಗಿಯೂ, ಮಿತವಾಗಿಯೂ ಸೇವಿಸುವುದರಿಂದ ಹೃದಯದ ತೊಂದರೆಗಳನ್ನು ತಡೆಗಟ್ಟಬಹುದು. ಅಲ್ಲದೇ ವಾಯು ಸಂಬಂಧಿತ ರೋಗಗಳು ನಿವಾರಣೆಯಾಗುವುವು.

ಮಾವಿನ ಎಲೆಗಳನ್ನು ತಂದು ನೆರಳಲ್ಲಿ ಒಣಗಿಸಿ ಚೂರ್ಣ ಮಾಡಿಟ್ಟುಕೊಂಡು ಅದಕ್ಕೆ ಸ್ವಲ್ಪ ಉಪ್ಪನ್ನು ಕಲಸಿ, ಹಲ್ಲುಗಳನ್ನು ದಿನವೂ ಉಜ್ಜಿದರೆ, ಎಲ್ಲಾರೀತಿಯ ದಂತ ಸಮಸ್ಯೆಗಳು ದೂರವಾಗುತ್ತವೆ. ಯಾವುದಾದರೂ ಆಯುಧಗಳಿಂದ ಗಾಯಗಳಾದರೆ ಒಣಗಿದ ಮಾವಿನ ಎಲೆಗಳನ್ನು ಸುಟ್ಟು ಬೂದಿ ಮಾಡಿ ಗಾಯಗಳ ಮೇಲೆ ಒತ್ತಿ ಹಿಡಿದರೆ ಕೂಡಲೇ ರಕ್ತಸ್ರಾವವು ನಿಯಂತ್ರಣಗೊಳ್ಳುವುದು ಹಾಗೂ ಗಾಯ ಶೀಘ್ರದಲ್ಲೇ ಗುಣವಾಗುವುದು. ಇಷ್ಟೆಲ್ಲಾ ಉಪಯೋಗವಿರುವ ಮಾವಿನಹಣ್ಣಿನ ಗಿಡವನ್ನು ನಮ್ಮ ಮನೆಗಳಲ್ಲಿ ತೋಟಗಳಲ್ಲಿ ಬೆಳೆಸೋಣ; ಮಾವಿನ ಹಣ್ಣುಗಳನ್ನು ಸವಿದು ಆರೋಗ್ಯವಾಗಿರೋಣ.



ವ್ಯಕ್ತಿ ವಿಶೇಷ ಮಾಲಿಕೆ

# ಡಾ. ಎಂ. ಎಸ್. ನೀಲಕಂಠ ರಾವ್

-ಕೆ. ಜನಾರ್ದನ ತುಂಗ



ಕುಷ್ಠರೋಗ - ಮನುಷ್ಯನ ಅಂಗಾಂಗಗಳನ್ನೇ ವಿಕೃತಿಗೊಳಿಸುವ ಈ ರೋಗದ ಹೆಸರೇ ಭಯ ಹುಟ್ಟಿಸುತ್ತದೆ. ಕುಷ್ಠರೋಗಿಗಳನ್ನು ಅಂದೂ ಇಂದೂ ಸಮಾಜದಿಂದ ದೂರವಿಡಲಾಗುತ್ತಿದೆ. ಒಂದು ಮಹಾನಗರದಲ್ಲಿ ಕುಷ್ಠ ರೋಗಿಗಳ ವ್ರಣಗಳಿಗೆ ಪಟ್ಟಿಕಟ್ಟಿ, ಸಾಂತ್ವನ ಹೇಳಿ, ಪ್ರಚಾರ ಗಿಟ್ಟಿಸಿ, ಧನಸಹಾಯ ಪಡೆದು, ನೋಬೆಲ್ ಪಾರಿತೋಷಕಕ್ಕೆ ಭಾಜನರಾದವರಿದ್ದಾರೆ. ಆದರೆ ಕುಷ್ಠರೋಗಿಗಳ ಶುಶ್ರೂಷೆಯ ಜೊತೆಗೆ ಕುಷ್ಠರೋಗವನ್ನೇ ನಿರ್ಮೂಲ ಮಾಡುತ್ತೇನೆಂದು ಪಣತೊಟ್ಟು ತಮ್ಮ ಜೀವನವನ್ನೇ ಅದಕ್ಕಾಗಿ ಸವೆಸಿದವರು ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪ. ಅಂತಹ ಅಪರೂಪದ ವ್ಯಕ್ತಿಗಳಲ್ಲೊಬ್ಬರು, ಡಾ. ಎಂ ಎಸ್ ನೀಲಕಂಠ ರಾವ್.

ನೀಲಕಂಠರಾಯರು 05/04/1927 ರಂದು ಮುಳಬಾಗಿಲಿನಲ್ಲಿ ಜನಿಸಿದರು. ಅವರ ತಂದೆ ಶ್ರೀಕಂಠ ಪಂಡಿತರೂ ಕೂಡ ನುರಿತ ವೈದ್ಯರಾಗಿದ್ದರು. ಇವರ ತಾಯಿ ಶ್ರೀಮತಿ ಜಯಲಕ್ಷ್ಮಮ್ಮ, ಪ್ರಸಿದ್ಧ ಜ್ಯೋತಿಷಿ ಸೂರ್ಯನಾರಾಯಣ ರಾಯರ ಮಗಳು. ಶೇಷಾದ್ರಿಪುರ ಹೈಸ್ಕೂಲಿನಲ್ಲಿ ನೀಲಕಂಠರಾಯರ ವಿದ್ಯಾಭ್ಯಾಸ ನಡೆಯಿತು. ಖಾಸಗಿಯಾಗಿ ತತ್ವಜ್ಞಾನ, ಸಮಾಜವಿಜ್ಞಾನ, ರಾಜಕೀಯಶಾಸ್ತ್ರ ಮತ್ತು ಅರ್ಥಶಾಸ್ತ್ರಗಳನ್ನು ಅಭ್ಯಾಸ ಮಾಡಿದ ಅವರು 1946ರಲ್ಲಿ ಬಿಎಸ್‌ಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಂದುವರಿಸಿದರು. ಎಂಬಿಬಿಎಸ್ ನಾಲ್ಕನೆಯ ವರ್ಷದಲ್ಲಿದ್ದಾಗ ಕ್ಷಯ ರೋಗಕ್ಕೆ ತುತ್ತಾಗಿ ಒಟ್ಟು 18 ತಿಂಗಳ ಕಾಲ ಚಿಕಿತ್ಸೆಪಡೆಯಬೇಕಾಯಿತು., ಮೈಸೂರಿನ ಟಿ ಬಿ ಸ್ಯಾನಿಟೋರಿಯಂನಲ್ಲಿ ಹೀಗೆ ಚಿಕಿತ್ಸೆ ಪಡೆಯುತ್ತಿದ್ದಾಗಲೇ ಅವರು ಪರೀಕ್ಷೆ ಬರೆದು ಉತ್ತೀರ್ಣರಾದರು. 1953 ರಲ್ಲಿ ಎಂಬಿಬಿಎಸ್ ಪದವಿ ಪಡೆದು 1954 ರಿಂದ ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜಿನಲ್ಲಿ ಅನಾಟಮಿ ಮತ್ತು ಪೆಥಾಲಜಿ ವಿಭಾಗದಲ್ಲಿ ಡೆಮಾನ್ಸ್ಟ್ರೇಟರ್ ಆಗಿ ಸೇವೆ ಸಲ್ಲಿಸಿದರು. 1957ರ ಸೆಪ್ಟೆಂಬರ್ ತಿಂಗಳಿನಲ್ಲಿ ಅವರು ಉನ್ನತ ವಿದ್ಯಾಭ್ಯಾಸಕ್ಕಾಗಿ ಬ್ರಿಟನ್ನಿಗೆ ಹೋದರು. ಎಂಆರ್‌ಸಿಪಿ ಮಾಡುತ್ತಿದ್ದಾಗ ಅಲ್ಲಿನ ಅಸಮರ್ಪಕ ಪರೀಕ್ಷಾ ಪದ್ಧತಿಯಿಂದ ಬೇಸತ್ತು ಪದವಿಗಿಂತ ಜ್ಞಾನಾರ್ಜನೆ ಮುಖ್ಯವೆಂದು ಭಾವಿಸಿ ಇಂಗ್ಲೆಂಡ್ ಮತ್ತು ಸ್ಕಾಟ್‌ಲೆಂಡಿನ ಬೇರೆ ಬೇರೆ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸಿದರು.

ನಾಲ್ಕು ವರ್ಷಗಳ ನಂತರ, 1961ರಲ್ಲಿ ನೀಲಕಂಠರಾಯರು ಭಾರತಕ್ಕೆ ಮರಳಿಬಂದರು. ಅವರು ಓದಿದ್ದು ಜನರಲ್ ಮೆಡಿಸಿನ್, ಕೆಲಸ ಮಾಡಿದ್ದು ಎದೆರೋಗಗಳ ಆಸ್ಪತ್ರೆಗಳಲ್ಲಿ. ಆದರೆ ಮುಂದೆ ಆಯ್ದುಕೊಂಡದ್ದು ಕುಷ್ಠರೋಗಿಗಳ ಚಿಕಿತ್ಸೆ. ಅವರು ಮಹಾರಾಷ್ಟ್ರದ ವಾರ್ಧಾದಲ್ಲಿರುವ ಗಾಂಧೀ ಸ್ಮಾರಕ ಕುಷ್ಠರೋಗ ಪ್ರತಿಷ್ಠಾನದ ನಿರ್ದೇಶಕರಾಗಿದ್ದ ಡಾ. ಆರ್ ವಿ ವಾರ್ದೇಕರ್ ಅವರಿಂದ ಕುಷ್ಠರೋಗ ಚಿಕಿತ್ಸೆಯ ಬಗ್ಗೆ ಮಾರ್ಗದರ್ಶನ ಪಡೆದು ನಂತರ ಆಂಧ್ರಪ್ರದೇಶದ ಚಿಲಕಲಪಲ್ಲಿ ಎಂಬ ಕುಗ್ರಾಮದ ಗಾಂಧೀ ಸ್ಮಾರಕ ಕುಷ್ಠರೋಗ ತರಬೇತಿ ಕೇಂದ್ರದಲ್ಲಿ ತಮ್ಮ ಸೇವೆಯನ್ನು ಪ್ರಾರಂಭಿಸಿದರು. ರೋಗಪತ್ತೆ, ರೋಗಿಗಳಿಗೆ ತಿಳುವಳಿಕೆ ನೀಡುವುದು ಮತ್ತು ಚಿಕಿತ್ಸೆ (SET) ಎಂಬ ಚಿಕಿತ್ಸಾಕ್ರಮದಲ್ಲಿ ಯುವಕ ಅಭ್ಯರ್ಥಿಗಳಿಗೆ ತರಬೇತಿ ನೀಡುವುದು ಅವರ ಕೆಲಸವಾಗಿತ್ತು.

ಅಂದಿನ ಕಾಲದಲ್ಲಿ ಕುಷ್ಠರೋಗದ ಚಿಕಿತ್ಸೆಗೆ ನುರಿತ ವೈದ್ಯರಾರೂ ಮುಂದೆ ಬರುತ್ತಿರಲಿಲ್ಲ. ಹೀಗಾಗಿ, ಯಾವ ತಿಳುವಳಿಕೆಯೂ ಇಲ್ಲದ ಕೆಲಸಗಾರನೊಬ್ಬ ರೋಗಿಗಳ ಸ್ಪರ್ಶಜ್ಞಾನವಿಲ್ಲದ ಅಂಗಾಂಗಗಳನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಹಾಕುತ್ತಿದ್ದ. ಆದರೆ ಸೂಕ್ತಚಿಕಿತ್ಸೆಯ ಮೂಲಕ ರೋಗಿಗಳ ವ್ರಣಗಳನ್ನು ವಾಸಿಮಾಡುವುದು ಸಾಧ್ಯ ಎಂದು ನಂಬಿದ್ದ ನೀಲಕಂಠರಾಯರು ಚಿಲಕಲಪಲ್ಲಿಯಲ್ಲಿ 12 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆ ಪ್ರಾರಂಭಿಸಿದರು. ತಾವೇ ರೋಗಿಗಳ ವ್ರಣಗಳ ಉಪಚಾರಕ್ಕೆ ನಿಂತರು. ಆಸ್ಪತ್ರೆಯ ಶೌಚಾಲಯಗಳನ್ನು ಶುಚಿಗೊಳಿಸಲು ಆಸ್ಪತ್ರೆಯ ಸಿಬ್ಬಂದಿ ಹಿಂಜರಿದಾಗ ತಾವೇ ಶೌಚಾಲಯಗಳನ್ನು ಶುಚಿಗೊಳಿಸಿದರು. ಇದರಿಂದಾಗಿ ಎಲ್ಲರೂ ಇವರ ಮಾದರಿಯನ್ನು ಅನುಸರಿಸುವಂತಾಯಿತು. ಜೊತೆಗೆ, ಸಂಬಂಧಿಕರಿಗೂ ಉಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದುದರಿಂದ ರೋಗಿಗಳಿಗೆ ಪ್ರೀತಿ ಅನುಕಂಪಗಳೂ ದೊರೆತವು. ಒಂದು ಕುಗ್ರಾಮದಲ್ಲಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಅತ್ಯುತ್ಕೃಷ್ಟ ಚಿಕಿತ್ಸೆ ನೀಡುವ ಸೌಕರ್ಯಗಳನ್ನು ಕಂಡು ವಿದೇಶೀಯರೂ ಅಚ್ಚರಿ ವ್ಯಕ್ತಪಡಿಸುವಂತಾಯಿತು. ಮುಂದೆ, ಕೇರಳದ ಕಡಲ ತೀರದ ಮಾರಾರಿಕುಳಂ ಎಂಬ ಊರಿನಲ್ಲಿ ಎರಡು ವರ್ಷ ಕೆಲಸ ಮಾಡಿದ ರಾಯರು ಈ ಅವಧಿಯಲ್ಲಿ ರೋಗದ ಸಾಮಾಜಿಕ ಆಯಾಮಗಳ ಕುರಿತು ಅಧ್ಯಯನವನ್ನು ಮಾಡಿದರು. ಇದೇ ಸಂದರ್ಭದಲ್ಲಿ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಉಪನ್ಯಾಸಕಿಯಾಗಿದ್ದ ಶಾರದಾ ಅವರನ್ನು ವಿವಾಹವಾದರು. ಆಕೆ ತಮ್ಮ ಹದಿಮೂರು ವರ್ಷಗಳ ಸೇವೆಯನ್ನು ತ್ಯಜಿಸಿ ರಾಯರೊಂದಿಗೆ ಕುಷ್ಠರೋಗಿಗಳ ಸೇವೆಯಲ್ಲಿ ಕೈಜೋಡಿಸಿದ್ದು ಅನ್ಯಾದೃಶ ಸಂಗತಿ.

ಈ ಸಮಯದಲ್ಲಿ ಗಾಂಧಿ ಸ್ಮಾರಕ ಕುಷ್ಠರೋಗ ಪ್ರತಿಷ್ಠಾನವು ವಾರ್ಧಾದ ಹೊರವಲಯದಲ್ಲಿ ಒಂದು ಹೊಸ ಸುಸಜ್ಜಿತ ಆಸ್ಪತ್ರೆಯೊಂದನ್ನು ನಿರ್ಮಿಸಲು ತೊಡಗಿತ್ತು. ಹೀಗಾಗಿ ರಾಯರು ಮಾರಾರಿಕುಳಂನಿಂದ ವಾರ್ಧಾಕ್ಕೆ ಹೋಗಬೇಕಾಯಿತು. ಅಲ್ಲಿದ್ದುದು 30 ಹಾಸಿಗೆಗಳ ಆಸ್ಪತ್ರೆ. ಆದರೆ, ಪ್ರತಿವರ್ಷ ಸುಮಾರು 220-225 ಜನ ರೋಗಿಗಳು ಚಿಕಿತ್ಸೆಗಾಗಿ ದಾಖಲಾಗುತ್ತಿದ್ದರು. ಕುಷ್ಠರೋಗಿಗಳು ಅಂದಿನ ಕಾಲದಲ್ಲಿ ತಿಂಗಳುಗಳ ಕಾಲ, ಅನೇಕ ಬಾರಿ ವರ್ಷಗಳ ಕಾಲ ಆಸ್ಪತ್ರೆಯಲ್ಲಿರಬೇಕಾಗುತ್ತಿತ್ತು. ಇದನ್ನು ಗಮನಿಸಿ, ನೀಲಕಂಠರಾಯರು ಹೊಸ ಚಿಕಿತ್ಸಾ ವಿಧಾನಗಳನ್ನು ಅನುಸರಿಸಿ, ರೋಗಿಗಳ ಆಸ್ಪತ್ರೆವಾಸವನ್ನು 10-15 ದಿನಗಳಿಗಿಳಿಯುವಂತೆ ಮಾಡಿದರು. ಡಾ. ಶಕುಂತಲಾ ಕರಾಟ್ ಅವರ ಬಳಿ 9 ತಿಂಗಳ ಕಾಲ ಪುನರ್‌ರಚನಾ ಶಸ್ತ್ರಚಿಕಿತ್ಸೆಯನ್ನು ಕಲಿತು ತಮ್ಮ ಆಸ್ಪತ್ರೆಯಲ್ಲಿ ಪುನರ್‌ರಚನಾ ಶಸ್ತ್ರಚಿಕಿತ್ಸೆಯನ್ನೂ ತಾವೇ ಪ್ರಾರಂಭಿಸಿದರು.

1970ರಲ್ಲಿ ನೀಲಕಂಠ ರಾಯರು ಪ್ರತಿಷ್ಠಾನದ ನಿರ್ದೇಶಕರಾದರು. ಈ ಸಂದರ್ಭದಲ್ಲಿ ಅನೇಕ ಕಾರ್ಯಾಗಾರಗಳನ್ನು ನಡೆಸಿ ಕುಷ್ಠರೋಗದ ಬಗ್ಗೆ ಜನಸಾಮಾನ್ಯರಲ್ಲಿದ್ದ ತಪ್ಪುತಿಳುವಳಿಕೆಗಳನ್ನು ದೂರಮಾಡಲು ಪ್ರಯತ್ನಿಸಿದರು. ಭಾರತದಿಂದ ಕುಷ್ಠರೋಗವನ್ನು ನಿರ್ಮೂಲನೆ ಮಾಡಲು ಯೋಜನೆಯೊಂದನ್ನು ತಯಾರಿಸಿ ಅಂದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಭೇಟಿಯಾಗಿ 33 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ಮನವೊಲಿಸಿದರು. ಕುಷ್ಠರೋಗದ ನಿಯಂತ್ರಣಕ್ಕಾಗಿ ರಾಷ್ಟ್ರವ್ಯಾಪಿ ಆಂದೋಲನ ಪ್ರಾರಂಭವಾಯಿತು.

ಡಾ. ನೀಲಕಂಠ ರಾಯರ ಸೇವೆಯನ್ನು ಗಮನಿಸಿ ಭಾರತ ಸರಕಾರವು 1974ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. ಜರ್ಮನಿಯ ಮ್ಯೂನಿಕ್‌ನ ಕುಷ್ಠರೋಗ ನಿವಾರಣಾ ಸಂಸ್ಥೆಯು ತನ್ನ ಪ್ರತಿಷ್ಠಿತ "ಡೇಮಿಯನ್" ಪದಕವನ್ನು ಮೊತ್ತಮೊದಲ ಬಾರಿಗೆ ಭಾರತೀಯರೊಬ್ಬರಿಗೆ ಪ್ರದಾನ ಮಾಡಿತು. 1976ರಲ್ಲಿ ಅವರು ಗಾಂಧಿ ಸ್ಮಾರಕ ಪ್ರತಿಷ್ಠಾನದಿಂದ ನಿವೃತ್ತರಾಗಿ ಬೆಂಗಳೂರಿಗೆ ಮರಳಿದರು. ಭಾರತ ಸರಕಾರ ಮತ್ತು ಕರ್ನಾಟಕ ರಾಜ್ಯಗಳ ಕುಷ್ಠರೋಗ ಸಲಹಾ ಸಮಿತಿಗಳ ಸದಸ್ಯರಾಗಿ ಕುಷ್ಠರೋಗ ಕ್ಷೇತ್ರದಲ್ಲಿ ದುಡಿಯುತ್ತಿರುವ ನೂರಾರು ಜನರಿಗೆ, ಸಂಘಸಂಸ್ಥೆಗಳಿಗೆ, ರಾಜ್ಯ ಸರಕಾರಗಳಿಗೆ ಮಾರ್ಗದರ್ಶನ ನೀಡತೊಡಗಿದರು.

ಕುಷ್ಠರೋಗದ ಚಿಕಿತ್ಸೆಗೆ ಅದುವರೆಗೂ ಬಳಸುತ್ತಿದ್ದ ಮಾತ್ರೆಗೆ ರೋಗಾಣುಗಳು ಪ್ರತಿರೋಧ ತೋರಿಸಿದ್ದರಿಂದ ಹೊಸ ಚಿಕಿತ್ಸಾ ಕ್ರಮದ ಅಗತ್ಯ ಕಂಡು ಬಂದಿತು. ಈ ಹೊಸ ಚಿಕಿತ್ಸಾ ಕ್ರಮದ ಬಗ್ಗೆ ಯಾವುದೇ ಪೂರ್ವ ಪರಿಶೀಲನೆಯಿರಲಿಲ್ಲ. ಹೀಗಾಗಿ ವಿಶ್ವ ಆರೋಗ್ಯ ಸಂಸ್ಥೆಯು 1981ರಲ್ಲಿ ಈ ಜವಾಬ್ದಾರಿಯನ್ನು ನೀಲಕಂಠ ರಾಯರಿಗೆ ಒಪ್ಪಿಸಿತು. ಆ ವರ್ಷದ ಗಾಂಧೀ ಜಯಂತಿಯ ದಿನ, ಆಚಾರ್ಯ ವಿನೋಬಾ ಭಾವೆಯವರ ಆಶೀರ್ವಾದದೊಂದಿಗೆ ವಾರ್ಧಾದಲ್ಲಿ ಪ್ರಾರಂಭವಾದ 21 ದಿನಗಳ "ಬಹು ಔಷಧಿ ಚಿಕಿತ್ಸೆ (MDT)" ರಾಯರ ಮಾರ್ಗದರ್ಶನದಲ್ಲಿ ಯಶಸ್ವಿಯಾಯಿತು. ವಿಶ್ವ ಆರೋಗ್ಯ ಸಂಸ್ಥೆಯ ಸಲಹೆಗಾರರಾಗಿ ರಾಯರು ವಿಶ್ವದಲ್ಲೇ ಮೊದಲಿಗೆ ಭಾರತದಲ್ಲಿ ಈ ಹೊಸ ಚಿಕಿತ್ಸಾ ಪದ್ಧತಿಯನ್ನು ಜಾರಿಗೊಳಿಸಿದರು. ಪರಿಣಾಮವಾಗಿ, 1991ರ ಹೊತ್ತಿಗೆ ಭಾರತದಲ್ಲಿ ಕುಷ್ಠರೋಗಿಗಳ ಸಂಖ್ಯೆ 40 ಲಕ್ಷದಿಂದ 12 ಲಕ್ಷಕ್ಕೆ ಇಳಿಯಿತು. ಚಿಕಿತ್ಸೆಯ ಅವಧಿ ಐದು ವರ್ಷಗಳಿಂದ ಒಂದು ವರ್ಷಕ್ಕಿಳಿಯಿತು. ಪ್ರಾರಂಭದಲ್ಲಿಯೇ ಚಿಕಿತ್ಸೆ ದೊರೆತು, ರೋಗದ ಪರಿಣಾಮವಾಗಿ ಉಂಟಾಗುವ ಅಂಗವಿಕಲತೆ ಇಲ್ಲವೇ ಇಲ್ಲವೆಂಬಷ್ಟು ಕಡಿಮೆಯಾಯಿತು. "ಚಿಕ್ಕಂದಿನಿಂದಲೂ ನಾನು ಪ್ರಪಂಚಕ್ಕೆ ಏನೋ ಉದ್ದೇಶದಿಂದ ಬಂದವನು ಎಂಬ ನಂಬಿಕೆ ಪ್ರಬಲವಾಗಿತ್ತು. ಮೊನ್ನೆ ಮೊನ್ನೆಯವರೆಗೂ ನನಗಿನ್ನೂ ಕೊಂಚ ಕೆಲಸವಿದೆ ಎನ್ನಿಸುತ್ತಿತ್ತು. ಆದರೆ ಈಗ ನಾನು ಬಂದ ಕೆಲಸ ಪೂರ್ಣವಾಯಿತು ಎನ್ನಿಸುತ್ತಿದೆ... ನನ್ನ ಕಾಲ ಮುಗಿದಿದೆ, ನಾನು ಇನ್ನು ಹೊರಡಲು ಸಿದ್ಧ" ಎಂದು 1998ರ ಫೆಬ್ರವರಿ ತಿಂಗಳಿನಲ್ಲಿ ಸ್ವರ್ಗಸ್ಥರಾಗುವ ಮೊದಲು ಅವರು ಹೇಳಿದ್ದ ಈ ಮಾತು ಅವರು ದೈವಾಂಶ ಸಂಭೂತರು ಎಂಬುದಕ್ಕೆ ಸಾಕ್ಷಿ. ಇಂತಹ ಮಹಾತ್ಮರಿಗೆ ಜನ್ಮ ನೀಡಿ ದೇಶವೇ ಧನ್ಯವಾಗಿದೆ.

ಡಾ. ನೀಲಕಂಠರಾಯರು ಅನಂತಕುಮಾರರ ಸೋದರಮಾವ; ಅವರ ತಾಯಿ ಗಿರಿಜಾ ಶಾಸ್ತ್ರಿಯ ಅಣ್ಣ. ಅನಂತಕುಮಾರರ ವ್ಯಕ್ತಿತ್ವದ ಮೇಲೆ ಅವರ ಧೀಮಂತ ಪೂರ್ವಿಕರ ಛಾಯೆ, ಪ್ರಭಾವಗಳಿದ್ದುದು ಅತಿಶಯವಲ್ಲ.

## ಅದಮ್ಯಚೇತನ ತಿಂಗಳ ವರದಿ (15.04.2022 - 15.05.2022)

### ಚಪಾತಿ ತಯಾರಿಕೆಗೆ ಹೊಗೆರಹಿತ ಒಲೆ



ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿ ಡಾ. ಲೋಕರಸ್ ಅವರು ಅಸ್ತ್ರ ಎಂಬ ಹೆಸರಿನ ಹೊಗೆರಹಿತ ಪರಿಸರ ಸ್ನೇಹಿ ಒಲೆಯೊಂದನ್ನು ಪರಿಚಯಿಸಿದ್ದು ಸರ್ವವಿದಿತ. ತೆಂಗಿನ ಚಿಪ್ಪು ಮತ್ತಿತರ ತ್ಯಾಜ್ಯವಸ್ತುಗಳನ್ನು ಕಡಿಮೆ ಪ್ರಮಾಣದಲ್ಲಿ ಉರಿಸಿ ಅಡುಗೆ ತಯಾರಿಸಬಹುದಾದ ಈ ಒಲೆಗೆ ತಕ್ಕ ಕಾವಲಿಯನ್ನು ಸಿದ್ಧಪಡಿಸಿ ಇದೀಗ ಅದಮ್ಯಚೇತನದ ಅಡುಗೆಮನೆಯಲ್ಲಿ ಚಪಾತಿಗಳನ್ನು ತಯಾರಿಸಲು ಬಳಸಲಾಗುತ್ತಿದೆ. ಹೆಚ್ಚಿನ ಇಂಧನವೆಚ್ಚಕ್ಕಾಗಲಿ, ಮಾಲಿನ್ಯಕ್ಕಾಗಲಿ ಎಡೆಗೊಡದೆ ದಿನವೊಂದಕ್ಕೆ 300 ಕ್ಕೂ ಹೆಚ್ಚು ಚಪಾತಿಗಳನ್ನು ತಯಾರಿಸಲಾಗುತ್ತಿರುವುದು ವಿಶೇಷ.

### ಹಸಿರು ಭಾನುವಾರ

ಅದಮ್ಯ ಚೇತನವು ಕಳೆದ 333 ವಾರಗಳಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವ ಹಸಿರು ಭಾನುವಾರ ಕಾರ್ಯಕ್ರಮದಲ್ಲಿ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಗಮನಾರ್ಹ. ಅದರಲ್ಲೂ ಯುವಜನರು ಮತ್ತು ಕಾಲೇಜು ವಿದ್ಯಾರ್ಥಿಗಳು ಅತ್ಯುತ್ಸಾಹದಿಂದ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿರುವುದು ಪ್ರಶಂಸನೀಯವಾಗಿದೆ. ಇತ್ತೀಚಿನ ಹಸಿರು ಭಾನುವಾರ ಕಾರ್ಯಕ್ರಮದಲ್ಲಿ ಸೇಂಟ್ ಜೋಸೆಫ್ ಕಾಲೇಜಿನ ವಿದ್ಯಾರ್ಥಿಗಳೂ ಸೇರಿದಂತೆ 120 ಜನರು ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಹಿಂದೆ ಪಬ್ಲಿಕ್ ಟಿವಿ ಸಹಯೋಗದಲ್ಲಿ ಒಂದು ಸಾವಿರ ಗಿಡಗಳನ್ನು ನೆಡುವ ಕಾರ್ಯಕ್ರಮ ಜರುಗಿದ್ದುದು ಸರಿಯಷ್ಟೆ. ಈ ಗಿಡಗಳಿಗೆ ಹನಿ ನೀರಾವರಿ ಪದ್ಧತಿಯಂತೆ ನೀರುಣಿಸುವ ಸಲುವಾಗಿ ಕೊಳವೆಗಳನ್ನು ಜೋಡಿಸುವ ಕಾರ್ಯದಲ್ಲೂ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರು. 330ನೇ ಹಸಿರು ಭಾನುವಾರದ ಕಾರ್ಯಕ್ರಮವು ಏಪ್ರಿಲ್ 24ರಂದು ಬಸವನಗುಡಿಯ ಅನಂತವನದ ಆವರಣದಲ್ಲಿ ಜರುಗಿದರೆ, 331ನೇ ಕಾರ್ಯಕ್ರಮವನ್ನು ಮೇ 1ರಂದು ಗೊಟ್ಟಿಗೆರೆಯ ಆರ್ಕಿಡ್ ಇಂಟರ್ ನ್ಯಾಶನಲ್ ಶಾಲೆಯ ಪಕ್ಕದ ಆವರಣದಲ್ಲಿ ನಡೆಯಿತು. 332ನೇ ಕಾರ್ಯಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಸಲಾಯಿತು. 333 ನೇ ಕಾರ್ಯಕ್ರಮವು ಕೆಂಪಾಬುಧಿ ಕೆರೆಯ ಆವರಣದಲ್ಲಿ ಜರುಗಿತು.

### ಸಾಪ್ತಾಹಿಕ ಕಾರ್ಯಕ್ರಮಗಳು

ಶ್ರೀ ಚೇತನ ಆನ್ ಲೈನ್ ಕಾರ್ಯಕ್ರಮಗಳು ಪ್ರತಿ ಮಂಗಳವಾರದಂದು ನಡೆಯುತ್ತಿದ್ದು ಪ್ರತಿ ವಾರ ದೇಶಭಕ್ತಿ ಗೀತೆ, ಮಂಕುತಿಮ್ಮನ ಕಗ್ಗ ವಾಚನ, ಔಷಧೀಯ ಸಸ್ಯ ಪರಿಚಯ, ಆರೋಗ್ಯ ಅಡುಗೆ ಮೊದಲಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಾಗುತ್ತಿದೆ. ಅದಮ್ಯ ಚೇತನದಲ್ಲಿ ಪ್ರತಿ ಗುರುವಾರ ಸಂಜೆ ಒಂದು ಗಂಟೆಯ ಅವಧಿಯಲ್ಲಿ ಗೀತಾಪಠನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ. ಭಗವದ್ಗೀತೆಯ ಪಠನದ ನಂತರ ಕಾರ್ಯಕರ್ತರು ತರಕಾರಿ ಹೆಚ್ಚುವ ಕೆಲಸದಲ್ಲಿ ಕೈಜೋಡಿಸುವ ಮೂಲಕ ಅದಮ್ಯಚೇತನದ ಅಡುಗೆಮನೆಯ ಕಾರ್ಯದಲ್ಲಿ ನೆರವಾಗುತ್ತಿದ್ದಾರೆ.

### ಪೌರಕಾರ್ಮಿಕರಿಗೆ ಆಹಾರ ಪೂರೈಕೆ

ಅದಮ್ಯ ಚೇತನವು ಪ್ರತಿ ನಿತ್ಯ ಬೆಂಗಳೂರಿನ ಸಾವಿರಾರು ಪೌರಕಾರ್ಮಿಕರಿಗೆ ಆಹಾರವನ್ನು ಒದಗಿಸುವ ಕರ್ತವ್ಯದಲ್ಲಿ ತೊಡಗಿಕೊಂಡಿದ್ದು, ನಗರದ 300 ಕೇಂದ್ರಗಳ ಮೂಲಕ ಪ್ರತಿದಿನ ಹದಿನಾಲ್ಕು ಸಾವಿರ ಪೌರಕಾರ್ಮಿಕರಿಗೆ ಆಹಾರವನ್ನು ಪೂರೈಸುವ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಅದಮ್ಯ ಚೇತನ ಯಶಸ್ವಿಯಾಗಿದೆ.

### ನಿತ್ಯ ಅನ್ನದಾನ

ಅದಮ್ಯಚೇತನದ ವತಿಯಿಂದ ನಿತ್ಯ ಅನ್ನದಾನ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುತ್ತಿದ್ದು ಪ್ರತಿದಿನ ನೂರಾರು ಜನರು ಮಧ್ಯಾಹ್ನದ ಊಟದ ಸೌಲಭ್ಯ ಪಡೆಯುತ್ತಿದ್ದಾರೆ. ಗವಿಪುರ, ನಗರ್ತಪೇಟೆ, ಜಯನಗರಗಳಲ್ಲಿ ಪ್ರತಿನಿತ್ಯ ನಡೆಯುವ ಅನ್ನದಾನ ಕಾರ್ಯಕ್ರಮವು ರಾಜರಾಜೇಶ್ವರಿ ನಗರದಲ್ಲಿ ವಾರಕ್ಕೊಮ್ಮೆ ನಡೆಯುತ್ತಿದೆ.

### ಗಣ್ಯರ ಭೇಟಿ

ಗ್ರ್ಯಾಮಿ ಪಶಸ್ತಿ ಪುರಸ್ಕೃತರಾದ ಶ್ರೀ ರಿಕಿ ಕೇಜ್ ಅವರು 16 ಏಪ್ರಿಲ್ 2022 ರಂದು ಅದಮ್ಯ ಚೇತನಕ್ಕೆ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳ ಬಗೆಗೆ ಮೆಚ್ಚುಗೆ ವ್ಯಕ್ತ ಪಡಿಸಿದರು. ಹಾಗೂ ಕರ್ನಾಟಕ ಸರ್ಕಾರದ ಗೃಹ ಸಚಿವರಾದ ಶ್ರೀ ಆರಗ ಜ್ಞಾನೇಂದ್ರ ಅವರು ಏಪ್ರಿಲ್ 22 ರಂದು ಅದಮ್ಯಚೇತನದ ಅಡುಗೆ ಮನೆಗೆ ಭೇಟಿ ನೀಡಿ ಸಂತಸ ವ್ಯಕ್ತ ಪಡಿಸಿದರು. ಮತ್ತು ಬಿ ಎಂ ಶ್ರೀ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ರಾಮ್‌ಪ್ರಸಾದ್, ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಸುನಿಲ್‌ಪುರಾಣಿಕ್, ಕನ್ನಡತಿ ಧಾರಾವಾಹಿ ಖ್ಯಾತಿಯ ಶ್ರೀಮತಿ ಚಿತ್ಕಲಾ ಬಿರಾದಾರ್ ಮೊದಲಾದವರು ಅದಮ್ಯಚೇತನಕ್ಕೆ ಭೇಟಿ ನೀಡಿದ್ದರು.

### ದೇಶ ಮೊದಲು ಸಂವಾದ



ಜಯನಗರದ ಕಾಶ್ಮೀರ ಭವನದಲ್ಲಿ ಅನಂತಕುಮಾರ್ ಪ್ರತಿಷ್ಠಾನದಿಂದ ಏರ್ಪಡಿಸಿದ್ದ ''ನಮ್ಮ ಕಾಶ್ಮೀರ - ನಮ್ಮ ಹೊಣೆ" ದೇಶ ಮೊದಲು ಸಂವಾದದ ಕಾರ್ಯಕ್ರಮವನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಉದ್ಘಾಟಿಸಿದರು. ಹಾಗೂ 22 ನೇ ಸಂಚಿಕೆಯ ಅನಂತಪಥ ಮಾಸಪತ್ರಿಕೆಯನ್ನು ಬಿಡುಗಡೆಗೊಳಿಸಿದರು. ಅನಂತಕುಮಾರ್ ಪ್ರತಿಷ್ಠಾನ ಅಧ್ಯಕ್ಷರಾದ ಪಿ.ವಿ ಕೃಷ್ಣಭಟ್, ಅದಮ್ಯಚೇತನದ ಮುಖ್ಯಸ್ಥೆ ಡಾ. ತೇಜಸ್ವಿನಿ ಅನಂತಕುಮಾರ್, ಪತ್ರಕರ್ತ ಆರ್.ಕೆ ಮಟ್ಟೂ, ಚಿತ್ರನಟ ಪ್ರಕಾಶ್ ಬೆಳವಾಡಿ, ಹಾಗೂ ಕಶೀರ ಪುಸ್ತಕದ ಲೇಖಕಿ ಸಹನಾ ವಿಜಯಕುಮಾರ್ ಮತ್ತಿತರರು ಉಪಸ್ಥಿತರಿದ್ದರು.


## ಅನಂತಪಥ

Editor: **Gopal T.S** | Assistance: **K. Janardhana Thunga** | Layout: **Ananthakumar Pratishthana**

**Assistance: Sanjay R / Trivikram Joshi**

Inputs: **Poornaprajna | Sreelakshmi Vishwanath | Chaya Bapat | Srikanth K | Pradeep Oak**

Photographs: **Ananthakumar Pratishthana | Adamya Chethana | Gopal TS | Chakrapani Kengeri | Internet Sources**

Printed at: **Rashtrothana Mudranalaya, Chamrajpet, Bengaluru**

Published by: **Dr. Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in

ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ

To get a e-version of this periodical SMS your name and place to 8884182415

## ಅದಮ್ಯ ಸೇವಾ

(ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ)

ಅನಂತ ಪ್ರೇರಣಾ ಕೇಂದ್ರದ ಉದ್ಘಾಟನಾ ಸಮಾರಂಭದ ಕೆಲವು ಚಿತ್ರಗಳು














ಗೃಹ ಸಚಿವರಾದ ಶ್ರೀ ಆರಗ  ಜ್ಞಾನೇಂದ್ರರವರು ಇತ್ತೀಚಿಗೆ ಅದಮ್ಯ ಚೇತನಕ್ಕೆ ಭೇಟಿ  ನೀಡಿದ ಸಂದರ್ಭ.



ಅಂತಾರಾಷ್ಟ್ರೀಯ ಖ್ಯಾತಿಯ ಗಾಯಕ ಶ್ರೀ ರಿಕಿ ಕೇಜ್ ರವರು ಅದಮ್ಯ ಚೇತನಕ್ಕೆ ಭೇಟಿ ನೀಡಿದ್ದರು.






ಹಸಿರು ಭಾನುವಾರದ ಕೆಲವು ಚಿತ್ರಗಳು

## ಅನಂತ ಚಿತ್ರಸಂಪುಟ

ಪಕ್ಷ ಸಂಘಟನಾ ಕಾರ್ಯದಲ್ಲಿ ಅತ್ಯಂತ ಕುಶಲರೆನಿಸಿದ್ದ ಅನಂತಕುಮಾರರವರು ಚುನಾವಣಾ ತಂತ್ರದ ತರಬೇತಿ, ಕಾರ್ಯಕರ್ತರಿಗೆ ಅಗತ್ಯವಾದ ಮಾರ್ಗದರ್ಶನ, ಮತದಾರರನ್ನು ಒಲಿಸುವ ಕೌಶಲ- ಎಲ್ಲದರಲ್ಲೂ ಚತುರರಾಗಿದ್ದರು.



















